


ಲುಕ್ಯ ವಾಸ್ತುಶಿಲ್ಪ ರಿಚಯ

ಡಾ। ಎ.ವಿ. ನರಸಿಂಹಮೂರ್ತಿ

ಚಾಲುಕ್ಯ ವಾಸ್ತುಶಿಲ್ಪ ಪರಿಚಯ

ಡಾ॥ ಎ. ವಿ. ನರಸಿಂಹಮೂರ್ತಿ

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ನೃಪತುಂಗ ರಸ್ತೆ
ಬೆಂಗಳೂರು-೫೬೦೦೦೨

ಡಾ॥ ಎ. ವಿ. ನರಸಿಂಹಮೂರ್ತಿ ಅವರಿಂದ ರಚಿಸಲ್ಪಟ್ಟ 'ಚಾಲುಕ್ಯ ವಾಸ್ತುಶಿಲ್ಪ ಪರಿಚಯು' ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದವರಿಂದ ಪ್ರಥಮ ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ (ನವೆಂಬರ್ ೧೯೮೪) ಐಬಿಎಚ್ ಪ್ರಕಾಶನದವರ ಕೃಪೆಯಿಂದ ಪ್ರಕಟಿಸಲ್ಪಟ್ಟಿದ್ದು.

CHALUKYA VASTHUSHILPA PARICHAYA — (a brief introduction to the Chalukya architecture) written in Kannada by Dr. A. V. Narasimha Murthy. Published by The Directorate of Kannada and Culture, Government of Karnataka, 14/3A Nrupathunga Road, Bangalore-560 002, in connection with the *FIRST WORLD KANNADA CONFERENCE (November 1984)* by the Courtesy of IBH Prakashana, Gandhinagar, Bangalore–560 009

ಬೆಲೆ ರೂ. ೨–೦೦

ಮುಖಪುಟ : ಬಿ. ಕೇಸರ್‌ಸಿಂಗ್

ಮುದ್ರಕರು : ಎಚ್. ಎಸ್. ಎನ್. ರಾವ್ ಐಬಿಎಚ್ ಪ್ರಕಾಶನ ಪ್ರಿಂಟರಿ,
ಬೆಂಗಳೂರು–೫೬೦ ೦೦೯

ಆರಂಭ

ಭಾರತದೇಶದಲ್ಲಿ ಆಳಿದ ಪ್ರಮುಖ ರಾಜಮನೆತನಗಳಲ್ಲಿ ಚಾಲುಕ್ಯರು ಮುಖ್ಯರಾದವರು. ತಮ್ಮ ರಾಜಕೀಯ ಸಾಧನೆ, ಸಾಂಸ್ಕೃತಿಕ ಕಾರ್ಯ ಗಳಿಂದ ಚಾಲುಕ್ಯ ವಂಶದ ಅನೇಕ ರಾಜರು ಭಾರತೀಯ ಇತಿಹಾಸದಲ್ಲಿ ಅಮರ ಕೀರ್ತಿಯನ್ನು ಗಳಿಸಿದ್ದಾರೆ. ಈ ಚಾಲುಕ್ಯರು ಕರ್ನಾಟಕದ ರಾಜರೆಂದು ತಿಳಿದಾಗ, ಕನ್ನಡಿಗರಾದ ನಮ್ಮೆಲ್ಲರಿಗೂ ಬಹು ಹೆಮ್ಮೆಯೂ ಸಂತೋಷವೂ ಉಂಟಾಗುತ್ತದೆ. ಇಂಥ ಚಾಲುಕ್ಯವಂಶದ ಅರಸುಗಳು ವಾಸ್ತು ಮತ್ತು ಶಿಲ್ಪಗಳಿಗೆ ಕೊಟ್ಟ ಕಾಣಿಕೆಯನ್ನು ತಿಳಿಯುವುದೇ ಇಲ್ಲಿ ನಮ್ಮ ಉದ್ದೇಶ.

ಬ್ರಹ್ಮನ ಚುಲುಕ ಅಥವಾ ಅಂಗೈಯಿಂದ ಉದ್ಭವನಾದ ವೀರನೇ ಈ ವಂಶದ ಮೂಲಪುರುಷನೆಂದೂ ಆದರಿಂದಲೇ ಈ ವಂಶಕ್ಕೆ ಚಾಲುಕ್ಯ ವಂಶ ಎಂದು ಹೆಸರಾಯಿತೆಂದೂ ದಂತಕಥೆಗಳು ತಿಳಿಸುತ್ತವೆ. ಇವರು ಉತ್ತರ ಭಾರತದಿಂದ ಬಂದವರೆನ್ನುವ ವಾದವೂ ಇದೆ. ಆದರೆ ಇವರು ಕನ್ನಡ ನಾಡಿನಲ್ಲಿಯೇ ಇದ್ದ ಶೂರರು ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಕನ್ನಡ ನಾಡಿನ ಕದಂಬರ ಆಶ್ರಯದಲ್ಲಿದ್ದು, ಅವರ ಪತನಾನಂತರ ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡ ಶೂರರು ಇವರು ಎಂದು ಸುಲಭವಾಗಿ ತೀರ್ಮಾನಿಸಬಹುದು. ಚಾಳುಕ್ಯ, ಚಾಲುಕ್ಯ ಮತ್ತು ಚಲುಕ್ಯ ಎಂಬ ವಿವಿಧ ಹೆಸರುಗಳಿಂದ ಖ್ಯಾತರಾಗಿರುವ ಇವರು ಹಾರೀತಿ ಪುತ್ರರು ಮತ್ತು ಮಾನವ್ಯ ಗೋತ್ರದವರು. ಇವರು ವಿಷ್ಣುಭಕ್ತರು. ವರಾಹವನ್ನು ತಮ್ಮ ಚಿಹ್ನೆಯನ್ನಾಗಿ ಮಾಡಿಕೊಂಡವರು.

ವಿವಿಧ ಶಾಖೆಗಳು

ಕನ್ನಡ ನಾಡಿನಲ್ಲಿ ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡ ಚಾಲುಕ್ಯರು ಅನೇಕ ಕವಲುಗಳಾಗಿ ಭಾರತದ ಅನೇಕ ಭಾಗಗಳಲ್ಲಿ ಆಳಿದರು. ಬಾದಾಮಿ

ಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡವರು ಬಾದಾಮಿ ಚಾಲುಕ್ಯರೆಂದು ಪ್ರಸಿದ್ಧಿಯಾಗಿದ್ದಾರೆ. ಆಂಧ್ರದೇಶದಲ್ಲಿ ಕುಬ್ಜ ವಿಷ್ಣು ವರ್ಧನನಿಂದ ಪ್ರಾರಂಭವಾದ ಮನೆತನದವರು ವೆಂಗಿಯ ಚಾಲುಕ್ಯರು ಎಂದು ಹೆಸರುವಾಸಿಯಾಗಿದ್ದಾರೆ. ಚಾಲುಕ್ಯರ ಒಂದು ವಂಶವು ದೂರದ ಗುಜರಾತಿನಲ್ಲಿ ಪ್ರಸಿದ್ಧಿಯಾಯಿತು. ಇವರು ಗುಜರಾತಿನ ಚಾಲುಕ್ಯರೆಂದು ಪ್ರಸಿದ್ಧಿಯಾಗಿದ್ದಾರೆ. ರಾಷ್ಟ್ರಕೂಟರ ಅನಂತರ ಕಲ್ಯಾಣವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡವರು ಕಲ್ಯಾಣದ ಚಾಲುಕ್ಯರು ಎಂದು ಖ್ಯಾತರಾಗಿದ್ದಾರೆ. ಇನ್ನು ಸಣ್ಣ ಸಣ್ಣ ರಾಜಮನೆತನಗಳಾಗಿ ಆಂಧ್ರ, ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಚಾಲುಕ್ಯರು ಹಂಚಿ ಹೋಗಿದ್ದಾರೆ. ಹೀಗೆ ಅಖಿಲ ಭಾರತ ವ್ಯಾಪ್ತಿಯನ್ನು ಹೊಂದಿದ ಚಾಲುಕ್ಯರು ಕರ್ನಾಟಕದಲ್ಲಿ ವಾಸ್ತು ಮತ್ತು ಶಿಲ್ಪ ಕಲೆಗಳಿಗೆ ವಿಶೇಷ ಪ್ರೋತ್ಸಾಹವನ್ನು ಕೊಟ್ಟಿದ್ದಾರೆ. ಇಲ್ಲಿ ಕರ್ನಾಟಕದಲ್ಲಿ ಆಳಿದ ಬಾದಾಮಿಯ ಚಾಲುಕ್ಯರ ಮತ್ತು ಕಲ್ಯಾಣದಲ್ಲಿ ಆಳಿದ ಕಲ್ಯಾಣದ ಚಾಲುಕ್ಯರ ವಾಸ್ತುಶಿಲ್ಪವನ್ನು ಗಮನಿಸಲಾಗಿದೆ.

ಬಾದಾಮಿಯ ಚಾಲುಕ್ಯರು

ಬಾದಾಮಿಯ ಚಾಲುಕ್ಯರು ಕ್ರಿಸ್ತಶಕ ಸುಮಾರು ೫೦೦ರಿಂದ ೭೫೭ರ ವರೆಗೆ ರಾಜ್ಯವಾಳಿದರು. ಈ ವಂಶದಲ್ಲಿ ಕೀರ್ತಿವರ್ಮ, ಇಮ್ಮಡಿ ಪುಲಿಕೇಶಿ, ವಿಜಯಾದಿತ್ಯ, ವಿಕ್ರಮಾದಿತ್ಯ ಮುಂತಾದ ಶ್ರೇಷ್ಠ ರಾಜರುಗಳು ಆಳಿದರು. ಉತ್ತರಾಪಥದ ಹರ್ಷನನ್ನು ಸೋಲಿಸಿದ ಇಮ್ಮಡಿ ಪುಲಿಕೇಶಿಯ ಕೀರ್ತಿಯು ಕನ್ನಡ ನಾಡಿನಲ್ಲಿ ಮನೆಮಾತಾಗಿದೆ. ಈ ರಾಜರುಗಳು ಶೂರರೂ, ಧೀರರೂ ಮಾತ್ರವಲ್ಲದೆ ಖ್ಯಾತ ಸಾಂಸ್ಕೃತಿಕ ವ್ಯಕ್ತಿಗಳೂ ಆಗಿದ್ದರು. ಇವರನ್ನು ಅಮರರನ್ನಾಗಿ ಮಾಡಿರುವುದು ಅವರು ನಿರ್ಮಿಸಿದ ಗುಹಾದೇವಾಲಯಗಳು, ದೇವಸ್ಥಾನಗಳು ಮತ್ತು ವರ್ಣಚಿತ್ರಗಳು.

ಕಲ್ಯಾಣದ ಚಾಲುಕ್ಯರು

ಬಾದಾಮಿಯ ಚಾಲುಕ್ಯರ ವಂಶದವರೇ ಆದ ಕಲ್ಯಾಣದ ಚಾಲುಕ್ಯರು ಕ್ರಿಸ್ತಶಕ ಹತ್ತನೆಯ ಶತಮಾನದಿಂದ ಹನ್ನೆರಡನೆಯ ಶತಮಾನದ ಕೊನೆಯವರೆಗೆ ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದರು. ಸತ್ಯಾಶ್ರಯ, ಜಗದೇಕಮಲ್ಲ, ಇಮ್ಮಡಿ ಸೋಮೇಶ್ವರ, ಆರನೆಯ ವಿಕ್ರಮಾದಿತ್ಯ ಮುಂತಾದ ರಾಜರು ಈ ವಂಶದಲ್ಲಿ ಖ್ಯಾತರಾಗಿದ್ದಾರೆ. ಈ ರಾಜರು ಶೂರರೂ ಧೀರರೂ ಮಾತ್ರವಲ್ಲದೆ ವಾಸ್ತುಶಿಲ್ಪಗಳಲ್ಲಿ ಆಸಕ್ತಿ ಹೊಂದಿದವರೂ ಆಗಿದ್ದುದು ನಾಡಿನ ಸೌಭಾಗ್ಯ. ಇವರು ನಿರ್ಮಾಣ ಮಾಡಿದ ವಾಸ್ತುಶಿಲ್ಪ ಕೃತಿಗಳ ಪರಿಚಯವನ್ನು ಇನ್ನು ಮಾಡಿಕೊಳ್ಳೋಣ.

ಮುಖ್ಯ ಲಕ್ಷಣಗಳು

ಬಾದಾಮಿ ಚಾಲುಕ್ಯರ ವಾಸ್ತುಶಿಲ್ಪ ಕೃತಿಗಳು ವಿಶೇಷವಾಗಿ ಐಹೊಳೆ, ಬಾದಾಮಿ, ಪಟ್ಟದಕಲ್ಲು, ಮಹಾಕೂಟ ಮುಂತಾದ ಕಡೆಗಳಲ್ಲಿವೆ. ಇವುಗಳಲ್ಲಿ ಬಲು ಮುಖ್ಯವಾದುದು ಐಹೊಳೆ. ಬಿಜಾಪುರ ಜಿಲ್ಲೆಯ ಹನಗುಂದ ತಾಲೂಕಿನಲ್ಲಿರುವ ಐಹೊಳೆಯು ಇಂದು ಕುಗ್ರಾಮವಾಗಿದೆ. ಆದರೆ ಕ್ರಿ. ಶ. ಆರನೆಯ ಶತಮಾನದಲ್ಲಿ ಆರ್ಯಪುರವೆಂಬ ಹೆಸರಿನಿಂದ ಕರ್ನಾಟಕದಲ್ಲಿ ಮಾತ್ರವಲ್ಲದೆ ಭಾರತದಲ್ಲಿಯೇ ವಿಶೇಷ ಮಹತ್ವವನ್ನು ಪಡೆದಿದ್ದಿತು. ಈ ಹಳ್ಳಿಯಲ್ಲಿ ನಮಗೆ ಇಂದು ಕಾಣುವ ದೇವಾಲಯಗಳ ಸಂಖ್ಯೆ ಸುಮಾರು ನೂರಿಪ್ಪತ್ತು! ಬಹುಶಃ ಭಾರತದಲ್ಲೆಲ್ಲಿಯೂ ಕಾಣದ ಒಂದು ದೃಶ್ಯ. ಇಷ್ಟೊಂದು ದೇವಾಲಯಗಳು ಭಿನ್ನ ಭಿನ್ನ ರೀತಿಯಲ್ಲಿ, ಶೈಲಿಯಲ್ಲಿ ಇರುವುದು ಮತ್ತೊಂದು ವೈಶಿಷ್ಟ್ಯ. ಒಂದು ಸಣ್ಣ ಮಂಟಪವಾದರೆ ಮತ್ತೊಂದು ವಿಶಾಲವಾದ ದೇವಾಲಯ. ಒಂದರಲ್ಲಿ ಶಿಲ್ಪಗಳೇ ಇಲ್ಲದೆ ಇದ್ದರೂ ಮತ್ತೊಂದರಲ್ಲಿ ಎಲ್ಲೆಲ್ಲೂ ಸುಂದರ ಶಿಲ್ಪಗಳೇ ಕಾಣುತ್ತವೆ. ಶಿಖರಗಳ ಆಕಾರ, ಕಂಬಗಳ ವಿನ್ಯಾಸಗಳಲ್ಲಿಯೂ ಒಂದೊಂದೂ ತನ್ನ


ಪ್ರತ್ಯೇಕತೆಯನ್ನು ಎತ್ತಿತೋರಿಸುತ್ತದೆ. ಕೆಲವೆಡೆಗಳಲ್ಲಿ ಒಂದು ದೇವಾಲಯಕ್ಕೂ ಮತ್ತೊಂದು ದೇವಾಲಯಕ್ಕೂ ಕೇವಲ ಒಂದೆರಡು ಅಡಿಗಳಷ್ಟು ಮಾತ್ರ ಅಂತರವಿದೆ. ಇಷ್ಟೊಂದು ದೇವಾಲಯಗಳನ್ನು ಈ ರೀತಿ ಒಂದೇ ಕಡೆ ಕಟ್ಟಲು ಕಾರಣಗಳೇನೆಂಬುದನ್ನು ತಿಳಿಯುವುದು ಅವಶ್ಯಕ.

ಪ್ರಯೋಗಶಾಲೆ


ಐಹೊಳೆಯಲ್ಲಿ ದೇವಾಲಯಗಳ ನಿರ್ಮಾಣ ಪ್ರಾರಂಭವಾದ ಕಾಲದಲ್ಲಿ ಭಾರತೀಯ ದೇವಾಲಯಗಳನ್ನು ಯಾವ ರೀತಿ ನಿರ್ಮಿಸಬೇಕು ಎನ್ನುವ ವಿಷಯದಲ್ಲಿ ಖಚಿತತೆಯು ಇದ್ದಿರಲಿಲ್ಲ. ಶಿಲ್ಪಶಾಸ್ತ್ರ ಗ್ರಂಥಗಳು ಇನ್ನೂ ವಿಶೇಷವಾಗಿ ಬೆಳೆದಿರಲಿಲ್ಲ. ಆದುದರಿಂದ ದೇವಾಲಯ ನಿರ್ಮಾಣಕಾರ್ಯದಲ್ಲಿ ಇನ್ನೂ ಪ್ರಯೋಗಗಳೇ ನಡೆಯುತ್ತಿದ್ದುವು. ಒಂದು ರೀತಿಯಲ್ಲಿ ಐಹೊಳೆಯು ವಾಸ್ತುಶಿಲ್ಪಿಗಳ ಒಂದು ಕಾಲೇಜಿನಂತೆ ಇಲ್ಲವೆ ಪ್ರಯೋಗಶಾಲೆಯಂತೆ ಇದ್ದಿತು. ಉತ್ತರ ಭಾರತ, ದಕ್ಷಿಣ ಭಾರತ, ಕರ್ನಾಟಕ ಮುಂತಾದ ಪ್ರದೇಶಗಳಿಂದ ಖ್ಯಾತ ಶಿಲ್ಪಿಗಳು ಇಲ್ಲಿ ಪ್ರಯೋಗಗಳನ್ನು ನಡೆಸಲು ಪ್ರಾರಂಭಿಸಿದರು. ಈ ಪ್ರಯೋಗಗಳ ಫಲವಾಗಿಯೇ ವಿವಿಧ ರೀತಿಯ ವಾಸ್ತುಕೃತಿಗಳು ಹತ್ತಾರು ರೀತಿಯಲ್ಲಿ ನೂರಾರು ಶಿಲ್ಪಿಗಳಿಂದ ನಿರ್ಮಿಸಲ್ಪಟ್ಟವು. ಕೆಲವರು ನಾಗರರೀತಿಯ ಅಂದರೆ ಉತ್ತರ ಭಾರತದ ಶಿಖರಗಳನ್ನು ನಿರ್ಮಿಸಿದರು ; ಮತ್ತೆ ಕೆಲವರು ದ್ರಾವಿಡರೀತಿಯ ಅಂದರೆ ದಕ್ಷಿಣ ಭಾರತದ ಶಿಖರಗಳನ್ನು ಕಟ್ಟಿದರು, ಇನ್ನಿತರರು ವೇಸರಶೈಲಿಯ ಶಿಖರಗಳನ್ನು ಅನುಸರಿಸಿದರು ; ಮಗದೊಬ್ಬನು ಬೌದ್ಧಚೈತ್ಯದಾಕಾರದ ಅಂದರೆ ಕುದುರೆಯ ಲಾಳಾಕಾರದ ದುರ್ಗದೇವಾಲಯವನ್ನು ನಿರ್ಮಿಸಿದನು; ಈ ರೀತಿ ವಿವಿಧ ನಮೂನೆಗಳ ಸಂಗಮವೇ ಐಹೊಳೆಯಲ್ಲಿ ಆಯಿತು. ಆದುದರಿಂದಲೇ ಐಹೊಳೆಯನ್ನು ಚಾಲುಕ್ಯ ವಾಸ್ತುಶಿಲ್ಪದ ತೊಟ್ಟಿಲು ಅಥವಾ ತವರುಮನೆ ಎಂದು ಕರೆಯುತ್ತಾರೆ.

ನಾಗರ, ದ್ರಾವಿಡ, ವೇಸರ

ನಾವು ಆಗಲೇ ಗಮನಿಸಿರುವಂತೆ ಭಾರತ ದೇಶದಲ್ಲಿ ಮೂರು ರೀತಿಯ ದೇವಾಲಯಂಗಳನ್ನು ಶಿಲ್ಪಗ್ರಂಥಗಳು ಹೆಸರಿಸುತ್ತವೆ : ನಾಗರ, ದ್ರಾವಿಡ, ಮತ್ತು ವೇಸರ. ಇವುಗಳ ಖಚಿತ ಲಕ್ಷಣಗಳ ವಿಷಯವು ಚರ್ಚಾಸ್ಪದವಾಗಿದ್ದರೂ ಸ್ಥೂಲವಾಗಿ ಹೇಳುವುದಾದರೆ ನಾಗರವು ಉತ್ತರ ಭಾರತದ ದೇವಾಲಯ ಶೈಲಿ. ಇಲ್ಲಿಯ ಶಿಖರಗಳು ಒಳಬಾಗುಳ್ಳವು. ದ್ರಾವಿಡ ರೀತಿಯ ಶಿಖರಗಳು ಮೇಲೆ ಹೋಗುತ್ತ ಕಿರಿದಾಗುತ್ತ ಹೋಗುತ್ತವೆ, ಪಿರಮಿಡ್ಡಿನ ರೀತಿಯಲ್ಲಿ. ವೇಸರರೀತಿಯ ಶಿಖರವೇನೆಂಬುದು ಸರಿಯಾಗಿ ತಿಳಿದಿಲ್ಲ. ಇದೇ ಚಾಲುಕ್ಯ ಶೈಲಿಯಿರಬಹುದೆಂದು ಊಹಿಸಲು ಅವಕಾಶ



ನಾಗರರೇಖಾ ಪ್ರಾಸಾದಶೈಲಿಯ ದೇವಾಲಯದ ಒಂದು ಮಾದರಿ



ದ್ರಾವಿಡ ವಿಮಾನಶೈಲಿಯ ಒಂದು ಮಾದರಿ

ಇವೆ. ಆದುದರಿಂದ ಭಾರತೀಯ ವಾಸ್ತುಶೈಲಿಗಳಲ್ಲಿ ಒಂದನ್ನು ಕಂಡು ಹಿಡಿದ ಮತ್ತು ಅದನ್ನು ಬೆಳೆಸಿದ ಕೀರ್ತಿಯು ಬಾದಾಮಿ ಚಾಲುಕ್ಯರಿಗೆ ಸೇರುತ್ತದೆ. ಈ ದೃಷ್ಟಿಯಿಂದಲೂ ಚಾಲುಕ್ಯರು ಗಮನಾರ್ಹರು.

ಚಾಲುಕ್ಯರ ವಾಸ್ತುಶಿಲ್ಪ ಕೃತಿಗಳೆಲ್ಲ ತಿಳಿಹಳದಿ ಅಥವಾ ನಸುಗೆಂಪು ವರ್ಣದ ಮರಳುಗಲ್ಲಿನಿಂದ ನಿರ್ಮಾಣವಾದವು. ಈ ಕಲ್ಲು ವಿಶೇಷವಾಗಿ ಬಿಜಾಪುರ ಜಿಲ್ಲೆಯಲ್ಲಿ ದೊರಕುತ್ತದೆ. ಇದು ಅವರ ಕೃತಿಗಳಿಗೆ ಒಂದು ರೀತಿಯ ವಿಶೇಷ ಸೊಬಗನ್ನು ಕೊಟ್ಟಿದೆ. ಅದರಲ್ಲಿಯೂ ಬೆಳದಿಂಗಳಿನಲ್ಲಿ ಇಲ್ಲವೇ ಸೂರ್ಯನು ಮುಳುಗುವ ಸಮಯದಲ್ಲಿ ಈ ದೇವಾಲಯಗಳು ವಿಶೇಷವಾದ ಸೌಂದರ್ಯವನ್ನು ಪ್ರದರ್ಶಿಸುತ್ತವೆ.

ಬಾದಾಮಿ ಚಾಲುಕ್ಯರ ದೇವಾಲಯಗಳ ರಚನೆಯಲ್ಲಿ ಆಯಾಕಾರದ, ಹೆಚ್ಚು ನಯಮಾಡದ ದೊಡ್ಡ ದೊಡ್ಡ ಚಪ್ಪಡಿಗಳು ವಿಶೇಷವಾಗಿ ಬಳಸಲ್ಪಟ್ಟಿವೆ. ಇವುಗಳನ್ನು ಗಾರೆ ಅಥವಾ ಸಿಮೆಂಟಿನಂಥ ಯಾವ ಬಂಧಕ ಸಾಮಗ್ರಿಯೂ ಇಲ್ಲದೆ ಒಂದರ ಮೇಲೆ ಒಂದರಂತೆ ಪೇರಿಸಿ ಗೋಡೆಗಳನ್ನು ಕಟ್ಟಿರುವುದು ಮುಖ್ಯವಾಗಿ ಗಮನಿಸಬೇಕಾದ ಅಂಶ. ವಾಸ್ತುಶಿಲ್ಪದ ಆರಂಭಕಾಲವಾದುದರಿಂದ ಇಲ್ಲಿ ಬೇಕಾಗಿರುವುದಕ್ಕಿಂತ ಹೆಚ್ಚಿಗೆ ಗಮನವನ್ನು ಭದ್ರತೆಗೆ ಕೊಟ್ಟಿದ್ದಾರೆ. ಕಾಲಕ್ರಮದಲ್ಲಿ ಇದು ಕಡಿಮೆಯಾಗಿ ತೆಳ್ಳನೆಯ ಕಂಬಗಳು, ನಯಮಾಡಿದ ಕಲ್ಲುಗಳು ಮುಂತಾದವುಗಳ ಉಪಯೋಗ ಹೆಚ್ಚುತ್ತದೆ.

ಐಹೊಳೆ ಗೌಡರಗುಡಿ

ಇನ್ನು ಚಾಲುಕ್ಯರ ಕಾಲದ ಕೆಲವು ಮುಖ್ಯ ವಾಸ್ತುಕೃತಿಗಳನ್ನು ಗಮನಿಸೋಣ. ನಾವು ಆಗಲೇ ಗಮನಿಸಿರುವಂತೆ ಐಹೊಳೆಯಲ್ಲಿ ಬಾದಾಮಿ ಚಾಲುಕ್ಯರ ವಾಸ್ತುಶಿಲ್ಪವು ಪ್ರಾರಂಭವಾಯಿತು. ಐಹೊಳೆಯಲ್ಲಿರುವ ಅತ್ಯಂತ ಪ್ರಾಚೀನ ಗುಡಿಯೆಂದರೆ ಗೌಡರಗುಡಿ. ಇದಕ್ಕೆ ಈ ಹೆಸರು ಬರಲು ಕಾರಣ ತಿಳಿಯದು. ಇಲ್ಲಿ ಭಾರತ ಸರ್ಕಾರದ ಪುರಾತತ್ವ ಇಲಾಖೆಯವರು ಇತ್ತೀಚೆಗೆ ನಡೆಸಿದ ಉತ್ಖನನದಿಂದ ಇದರ ಪ್ರಾಚೀನತೆಯು ತಿಳಿದು ಬಂದಿದೆ. ಈ ಗುಡಿಯ ರಚನೆ ವೈಶಿಷ್ಟ್ಯಪೂರ್ಣವಾಗಿದೆ. ಅಧಿಷ್ಠಾನದ



ಐಹೊಳೆ ಗೌಡರಗುಡಿಯು ದ್ವಾರಬಂಧ

ಮೇಲೆ ನಿಂತಿರುವ ಈ ಗುಡಿಯಲ್ಲಿ ಹದಿನಾರು ಚಚ್ಚೌಕ ಕಂಬಗಳು ಹೊರಗೋಡೆಯಲ್ಲಿವೆ. ಒಳಗಡೆ ನಾಲ್ಕು ಕಂಬಗಳಿದ್ದು ಮಂಟಪವನ್ನು ಸೂಚಿಸುತ್ತವೆ. ಇವುಗಳ ಮೇಲೆ ಸಾದಾ ಬೋದಿಗೆಗಳಿವೆ. ಆದರೆ ಅವುಗಳ ಮೇಲಿನ ತೊಲೆಗಳು ಅಲಂಕಾರಪೂರ್ಣವಾಗಿವೆ. ಹೂವುಗಳು, ಮನುಷ್ಯರು ಮತ್ತು ಪ್ರಾಣಿಗಳ ಕೆತ್ತನೆಯ ಕೆಲಸ ಸುಂದರವಾಗಿದೆ. ಈ ಗುಡಿಯ ಗರ್ಭಗೃಹದ ಬಾಗಿಲುವಾಡದ ಕೆತ್ತನೆಯೂ ಬಲು ಸುಂದರವಾಗಿದೆ. ಮಾನುಷ ರೂಪದಲ್ಲಿರುವ ಗರುಡನು ನಾಗಗಳ ಬಾಲಗಳನ್ನು ಹಿಡಿದು ಆಕಾಶದಲ್ಲಿ ಹಾರುತ್ತಿರುವಂತೆ ಕೆತ್ತಲಾಗಿದೆ. ಗರುಡನ ಮೇಲ್ಭಾಗದಲ್ಲಿ ಕಮಲಪುಷ್ಪದ ಮೇಲೆ ಲಕ್ಷ್ಮಿಯು ಇದ್ದಾಳೆ. ಅವಳಿಗೆ ಎರಡು ಆನೆಗಳು ಅಭಿಷೇಕ ಮಾಡುತ್ತಿವೆ. ಸರೋವರದಲ್ಲಿ ಇನ್ನೆರಡು ಆನೆಗಳು ನಿಂತಿವೆ. ಲಕ್ಷ್ಮಿಯು ಕೈಯಲ್ಲಿ ಕಮಲಗಳನ್ನು ಹಿಡಿದಿದ್ದಾಳೆ. ಇದು ದುರ್ಗಾಭಗವತಿಯ ದೇವಾಲಯವಾಗಿದ್ದಿತೆಂದೂ ಇದೇ ಕರ್ನಾಟಕದಲ್ಲಿ ಆ ದೇವತೆಗೆ ಕಟ್ಟಲಾದ ಮೊಟ್ಟಮೊದಲನೆಯ ಗುಡಿಯೆಂದೂ ಕೆಲವು ವಿದ್ವಾಂಸರು ಭಾವಿಸುತ್ತಾರೆ.

ಲಾಡ್‌ಖಾನ್ ದೇಗುಲ

ಚಾಲುಕ್ಯ ದೇವಾಲಯದ ಮುಂದಿನ ಹಂತವನ್ನು ಲಾಡ್‌ಖಾನ್ ದೇಗುಲದಲ್ಲಿ ಕಾಣುತ್ತೇವೆ. ಸ್ವಲ್ಪ ವರುಷಗಳ ಕೆಳಗೆ ಈ ಪಾಳುಬಿದ್ದ ಗುಡಿಯಲ್ಲಿ ಒಬ್ಬ ಮುಸಲ್ಮಾನನು ವಾಸವಾಗಿದ್ದುದರಿಂದ ಇದಕ್ಕೆ ಆ ಹೆಸರು ಬಂದಿತು. ಇದರ ಕಾಲ ಸುಮಾರು ಕ್ರಿ. ಶ. ೪೫೦. ಈ ಗುಡಿಯು ಒಂದು ದೊಡ್ಡ ಹಜಾರದಂತಿದೆ. ಮರದ ಕಟ್ಟಡಗಳನ್ನು ಅನುಕರಿಸಿ ಈ ದೇವಾಲಯವನ್ನು ಕಟ್ಟಿದಂತೆ ತೋರುವುದು. ಬಹಳ ಸಣ್ಣದಾದ ಗರ್ಭಗುಡಿಯಲ್ಲಿ ಈಶ್ವರ ಲಿಂಗವಿದೆ. ಅದರ ಮುಂಭಾಗದಲ್ಲಿ ನಂದಿಯಿದೆ. ಆದುದರಿಂದ ಇದೊಂದು ಶಿವಾಲಯ. ಗರ್ಭಗುಡಿಗೆ ಪ್ರದಕ್ಷಿಣಪಥವಿಲ್ಲ. ದೊಡ್ಡ ದೊಡ್ಡ ಕಲ್ಲಿನ ಚಪ್ಪಡಿಗಳನ್ನು ಇಳಿಜಾರಾಗಿರುವಂತೆ ಒಂದರ ಪಕ್ಕದಲ್ಲಿ ಮತ್ತೊಂದು ಇರುವಂತೆ ಜೋಡಿಸಿ ಚಾವಣಿಯನ್ನು ರಚಿಸಲಾಗಿದೆ. ಇಲ್ಲಿ ಕಾಣಬರುವ ಮತ್ತೊಂದು ಮುಖ್ಯ ಅಂಶವೆಂದರೆ ಮಾಳಿಗೆಯ ಮೇಲಿರುವ ಮತ್ತೊಂದು ಗರ್ಭಗೃಹ. ಇದೇ ಶಿಖರಕ್ಕೆ ನಾಂದಿಯಾದಂತೆ ತೋರುತ್ತದೆ. ಲಾಡ್‌ಖಾನ್ ದೇವಾಲಯದ ಶಿಲ್ಪಗಳೂ ಸುಂದರವಾದವು. ಮುಖಮಂಟಪದ ಆಗ್ನೇಯ ಕಂಬದ ಮೇಲೆ ಜಲದೇವತೆಯಾದ ಯಮುನೆಯ ಶಿಲ್ಪವಿದೆ. ಅವಳು ತನ್ನ ವಾಹನವಾದ ಆಮೆಯ ಮೇಲೆ ನಿಂತಿರುವಳು. ಭಾರತೀಯ ಶಿಲ್ಪ ಸಂಪ್ರದಾಯದಲ್ಲಿ ಯಮುನೆಯು ಶುಭಸಂಕೇತ; ಆದುದರಿಂದ ಗಂಗೆ ಮತ್ತು ಯಮುನೆಯರನ್ನು ದೇವಾಲಯದಲ್ಲಿ ಕೆತ್ತುವುದು ಪ್ರಾಚೀನ ಪದ್ಧತಿ. ಇದು ಗುಪ್ತರ ಕಾಲದಿಂದಲೂ ನಮಗೆ ಕಂಡುಬರುತ್ತದೆ. ಬಹುಶಃ ಇಲ್ಲಿಯ ಇನ್ನೊಂದು ಕಂಬದ ಮೇಲೆ ಇದ್ದಿರಬಹುದಾದ ಗಂಗೆಯ ಶಿಲ್ಪವು ಹಾಳಾಗಿದೆ. ಕೆಲವು ಕಡೆಗಳಲ್ಲಿ ಗಂಗೆ ಮತ್ತು ಯಮುನೆಯರ ಬದಲು ಅವರ ವಾಹನಗಳಾದ ಮೊಸಳೆ ಮತ್ತು ಆಮೆಗಳನ್ನು ಕೆತ್ತುವುದು ವಾಡಿಕೆ. ಮುಖಮಂಟಪದ ಮತ್ತೊಂದು ಕಂಬದ ಮೇಲೆ ಮರದ ಕೆಳಗೆ ನಿಂತಿರುವ ಸ್ತ್ರೀಪುರುಷರ ಶಿಲ್ಪಗಳಿವೆ. ಮರದ ಮೇಲೆ ಹಣ್ಣುಗಳು ನೇತಾಡುತ್ತಿರುವುದು. ಕೋತಿಯೊಂದು ಅದನ್ನು ನೋಡುತ್ತಿರುವುದು ಬಲು ಸುಂದರವಾಗಿದೆ. ಮತ್ತೊಂದು ಕಂಬದಲ್ಲಿ ರತಿ ಮತ್ತು ಮನ್ಮಥರ ಶಿಲ್ಪವಿದೆ. ಮನ್ಮಥನು ಕೈಯಲ್ಲಿ ಬಿಲ್ಲನ್ನು ಹಿಡಿದಿದ್ದಾನೆ. ಇಲ್ಲಿರುವ ಇತರ ಶಿಲ್ಪಗಳಲ್ಲಿ ಬ್ರಹ್ಮ, ಸೂರ್ಯ ಗಮನಿಸಬೇಕಾದವು. ಲಾಡ್‌ಖಾನ್ ದೇವಾಲಯದ ಮತ್ತೊಂದು

ಮುಖ್ಯ ಅಂಶವೆಂದರೆ ಜಾಲಂಧ್ರಗಳು. ಗಾಳಿ ಮತ್ತು ಬೆಳಕು ಒಳಬರುವಂತೆ ಕಲ್ಲಿನಲ್ಲಿ ಕೆತ್ತಿದ ಕಿಟಕಿಗಳೇ ಜಾಲಂಧ್ರಗಳು. ಒಟ್ಟಿನಲ್ಲಿ ಹೇಳುವುದಾದರೆ ನೋಡಲು ಸಾಮಾನ್ಯವಾಗಿ ಕಂಡರೂ, ದೇವಾಲಯದ ಪ್ರಾರಂಭ ಮತ್ತು ಬೆಳವಣಿಗೆಯ ದೃಷ್ಟಿಯಿಂದ ಲಾಡ್‌ಖಾನ್ ದೇವಾಲಯ ಪ್ರಾಮುಖ್ಯತೆಯನ್ನು ಪಡೆದಿದೆ.

ದುರ್ಗ ದೇವಾಲಯ

ಸುಮಾರು ಇದೇ ಕಾಲಕ್ಕೆ ಸೇರಬಹುದಾದ, ಆದರೆ ವಿಶಿಷ್ಟವಾದ ದೇವಾಲಯವೆಂದರೆ ದುರ್ಗ ದೇವಾಲಯ. ಇದು ದುರ್ಗಾದೇವಿಯ ಆಲಯವಲ್ಲ; ಕೋಟೆಯ ಬಾಗಿಲ ಬಳಿ ಈ ದೇವಾಲಯವಿರುವುದರಿಂದ ಇದನ್ನು ಹಾಗೆ ಕರೆಯಲಾಯಿತು. ಈ ದೇವಾಲಯವು ವಾಸ್ತುಶೈಲಿಯಿಂದ ಬಹಳ ಖ್ಯಾತವಾದ ಹಿಂದೂ ದೇವಾಲಯ. ಸಾಮಾನ್ಯವಾಗಿ ಹಿಂದೂ ದೇವಾಲಯಗಳು ಚೌಕವಾದ ಇಲ್ಲವೇ ಆಯಾಕಾರದ ಕಟ್ಟಡಗಳು. ಬೌದ್ಧರ ಚೈತ್ಯಾಲಯಗಳು ಹಿಂಭಾಗದಲ್ಲಿ ಗುಂಡಗಿರುವ (ಗಜಪೃಷ್ಠಾಕಾರ) ಕಟ್ಟಡಗಳು. ದುರ್ಗ ದೇವಾಲಯದಲ್ಲಿ ಬೌದ್ಧರ ಕುದುರೆಯ ಲಾಳಾಕಾರದ ವಿನ್ಯಾಸವನ್ನು ಅಳವಡಿಸಿದೆ. ಇದೇ ಈ ದೇವಾಲಯದ ವೈಶಿಷ್ಟ್ಯ. ಆದರೆ ನಾವು ಆಗಲೇ ಗಮನಿಸಿರುವಂತೆ ಹತ್ತಾರು ಪ್ರಯೋಗಗಳನ್ನು ಮಾಡುವಾಗ ಒಬ್ಬ ಶಿಲ್ಪಿಯು ಈ ರೀತಿಯ ಗಜಪೃಷ್ಠಾಕೃತಿಯ ದೇವಾಲಯವನ್ನು ನಿರ್ಮಿಸಿರಬೇಕು. ಆದರೆ ಇದು ಅಷ್ಟು ಸಮರ್ಪಕವಾಗಿ ಕಾಣದೇ ಹೋದುದರಿಂದ, ಈ ರೀತಿಯ ಕಟ್ಟಡಗಳನ್ನು ಮುಂದೆ ಕೈಬಿಡಲಾಯಿತು. ಹೀಗಾಗಿ ದುರ್ಗ ದೇವಾಲಯವು ಲಾಳಾಕಾರದ ವಿನ್ಯಾಸಕ್ಕೆ ಐಹೊಳೆಯಲ್ಲಿ ಏಕೈಕ ಉದಾಹರಣೆಯಾಗಿ ಉಳಿದಿದೆ. ಈ ರೀತಿಯ ಕಟ್ಟಡಗಳು ಬೇರೆಯ ಮಹಾಕೂಟ, ತೇರ್, ಚಜರ್ಲಗಳಲ್ಲಿವೆ. ಅವೆಲ್ಲವುಗಳಿಗಿಂತ ದುರ್ಗದ ಸುಂದರವಾದುದು. ಮಧ್ಯದಲ್ಲಿರುವ ಗರ್ಭಗೃಹ, ಅದರ ಮುಂದಿನ ಮಂಟಪ, ಅದರ ಸುತ್ತಲೂ ಪ್ರದಕ್ಷಿಣಾಪಥ. ಇದರ ಹೊರಗೆ ಇದೇ ಆಕಾರದಲ್ಲಿ ಎತ್ತರದ ಜಗಲಿ ಮತ್ತು ಕಂಬಗಳನ್ನೊಳಗೊಂಡ ಇನ್ನೊಂದು ಪ್ರಾಕಾರ.



ಐಹೊಳೆ ದುರ್ಗ ದೇವಾಲಯ

ದೇವಾಲಯವನ್ನು ಪ್ರವೇಶಿಸಲು ಮುಂಭಾಗದಲ್ಲಿ ಎಡ ಮತ್ತು ಬಲಗಳಲ್ಲಿ ಮೆಟ್ಟಿಲುಗಳ ಸಾಲು—ಇವು ದುರ್ಗ ಗುಡಿಯ ಮುಖ್ಯ ಅಂಗಗಳು. ಅಲ್ಲಲ್ಲಿ ಜಾಲಂಧ್ರಗಳಿವೆ. ಎರಡನೆಯ ಸುತ್ತಿನ ಹೊರಗೋಡೆಯಲ್ಲಿ ಗೂಡುಗಳಿವೆ. ಅವುಗಳಲ್ಲಿ ಸುಂದರ ಶಿಲ್ಪಗಳಿವೆ. ಗರ್ಭಗೃಹದ ಮೇಲೆ ನಾಗರಶೈಲಿಗೆ ಸೇರಿದ, ಸ್ವಲ್ಪ ಕಾಲಾನಂತರ ಕಟ್ಟಿದ ಶಿಖರವಿದೆ. ಈ ದೇವಾಲಯವು ೨೫.೬ ಮೀ. ಉದ್ದ, ೧೧ ಮೀ. ಅಗಲ ಮತ್ತು ನೆಲದಿಂದ ೯.೮ ಮೀ. ಎತ್ತರವಾಗಿದೆ.

ದೇವಾಲಯದ ಚೌಕನೆಯ ಕಂಬಗಳಲ್ಲಿ ಅನೇಕ ಸ್ತ್ರೀಪುರುಷರ ಶಿಲ್ಪಗಳಿವೆ. ಇವು ಆಕರ್ಷಕವಾಗಿರುವುದು ಮಾತ್ರವಲ್ಲದೆ ಆ ಕಾಲದ ಜನಗಳ ಬಟ್ಟೆ, ಆಭರಣ, ಕೇಶವಿನ್ಯಾಸ ಇವುಗಳನ್ನು ತಿಳಿಯಲು ಸಹಾಯಕವಾಗಿವೆ. ಆಗಿನ ಕಾಲದಲ್ಲಿ ಗಂಡಸರೂ ಉದ್ದನೆಯ ಕೂದಲನ್ನು ಬೆಳೆಸುತ್ತಿದ್ದುದು ಈ

ಶಿಲ್ಪಗಳಿಂದ ತಿಳಿಯುತ್ತದೆ. ಅಧಿಷ್ಠಾನದ ಮೇಲೆ ಕೆತ್ತಿರುವ ರಾಮಾಯಣದ ಶಿಲ್ಪಗಳು ನಮ್ಮ ಮನಸ್ಸನ್ನು ಸೆಳೆಯುತ್ತವೆ. ಮುಖಮಂಟಪದ ಕಂಬಗಳ ಮೇಲೆ ಉಗ್ರನರಸಿಂಹ ಮತ್ತು ಅರ್ಧನಾರೀಶ್ವರ ಶಿಲ್ಪಗಳಿವೆ. ನರಸಿಂಹನು ಹೊಸ್ತಿಲ ಮೇಲೆ ನಿಂತು ಹಿರಣ್ಯಕಶಿಪುವಿನ ಹೊಟ್ಟೆಯನ್ನು ಉಗುರುಗಳಿಂದ ಬಗೆಯುತ್ತಿದ್ದಾನೆ. ಮೇಲಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರ ಹಿಡಿದಿದ್ದಾನೆ. ನರಸಿಂಹನ ಕೋಪ ಸುಂದರವಾಗಿ ಮೂಡಿಬಂದಿದೆ ಈ ಶಿಲ್ಪದಲ್ಲಿ. ಅರ್ಧನಾರೀಶ್ವರ ಅಂದರೆ ಗಂಡು ಮತ್ತು ಹೆಣ್ಣುಗಳನ್ನು ಈ ಶಿಲ್ಪದಲ್ಲಿ ಸುಂದರವಾಗಿ ಕೆತ್ತಿದೆ. ಬಲಭಾಗವು ಈಶ್ವರನ ಅರ್ಧಭಾಗವನ್ನು, ಎಡಭಾಗವು ಪಾರ್ವತಿಯ ಅರ್ಧ ದೇಹವನ್ನು ಸೂಚಿಸುತ್ತದೆ. ಇದು ಶಿವ-ಶಕ್ತಿಯರ ಸಂಯುಕ್ತ ಸಂಕೇತ. ಶಿವನು ಬಲಗೈನಲ್ಲಿ ಪರಶುವನ್ನು ಹಿಡಿದು ಮೊಣಕಾಲಿನವರೆಗೆ ವಸ್ತ್ರವನ್ನು ಧರಿಸಿದ್ದಾನೆ. ಪಾರ್ವತಿಯು ನೆರಿಗಿಟ್ಟ ಸೀರೆಯು ಪಾದದವರೆಗೂ ಇರುವುದು. ಈಶ್ವರನ ಪುರುಷ ಮುಖ ಪಾರ್ವತಿಯ ಮುಖದ ಸೌಂದರ್ಯವನ್ನು ಎತ್ತಿ ತೋರಿಸುತ್ತದೆ. ಮತ್ತೊಂದು ಕಂಬದ ಮೇಲೆ ಗಂಧರ್ವರು, ಗಣಗಳು ಕೆತ್ತಲ್ಪಟ್ಟಿದ್ದಾರೆ.

ಹೊರಗೋಡೆಯ ಗೂಡುಗಳಲ್ಲಿ ೩–೪ ಅಡಿ ಎತ್ತರದ ಸುಂದರ ಶಿಲ್ಪಗಳಿವೆ. ಇವುಗಳಲ್ಲಿ ನಂದಿಯ ಮೇಲೆ ಕುಳಿತಿರುವ ಈಶ್ವರನ ಶಿಲ್ಪ, ಗಜನಾಶನ. ಅದರ ಪಕ್ಕದಲ್ಲಿ ನರಸಿಂಹ, ವಿಷ್ಣು, ಮಹಿಷಾಸುರ ಮರ್ದಿನಿ, ಹರಿಹರರ ಶಿಲ್ಪಗಳಿವೆ. ಮಹಿಷಾಸುರಮರ್ದಿನಿಯು ದುರ್ಗಾದೇವಿಯ ಒಂದು ರೂಪ. ಅವಳು ಕೋಣದ ರೂಪದಲ್ಲಿರುವ ಮಹಿಷಾಸುರನ ಬೆನ್ನ ಮೇಲೆ ತನ್ನ ಎಡಗಾಲನ್ನು ಒತ್ತಿ ಹಿಡಿದಿದ್ದಾಳೆ. ಒಂದು ಕೈಯಿಂದ ಕೋಣದ ಕುತ್ತಿಗೆಯನ್ನು ತ್ರಿಶೂಲದಿಂದ ತಿವಿಯುತ್ತಿದ್ದಾಳೆ. ಇದೂ ಒಂದು ಉತ್ತಮ ಶಿಲ್ಪ.

ಕೊಂತಗುಡಿ

ಈ ದೇವಾಲಯವನ್ನು ಬಿಟ್ಟು ಮುಂದೆ ಹೋದರೆ ಕೊಂತಗುಡಿಗಳ ಗುಂಪು ಕಾಣಬರುತ್ತದೆ. ಇವು ಅತ್ಯಂತ ಪ್ರಾಚೀನ ಗುಡಿಗಳೆಂದು ಕೆಲವು



ಕೊಂತಗುಡಿಗಳಲ್ಲಿ ಒಂದು

ಮತ. ಕಾರಣವೇನೆಂದರೆ ಇವುಗಳಲ್ಲಿ ಇತರ ಗುಡಿಗಳಲ್ಲಿರುವಂತೆ ಪ್ರದಕ್ಷಿಣ ಪಥವಿಲ್ಲ. ಮುಖಮಂಟಪಗಳಲ್ಲಿರುವ ಚೌಕನೆಯ ಕಂಬಗಳು ಮತ್ತು ಅವುಗಳಲ್ಲಿನ ಶಿಲ್ಪ ಪ್ರಾಚೀನತೆಯನ್ನು ಸಾರುತ್ತವೆ. ಇವುಗಳಲ್ಲಿ ಮುಖ್ಯವಾದವು ತ್ರಿಮೂರ್ತಿ, ಉಮಾ ಮಹೇಶ್ವರ, ಶೇಷಶಾಯಿ, ಅರ್ಧನಾರೀಶ್ವರ, ಗಜಸಂಹಾರಮೂರ್ತಿ ಮುಂತಾದವು.

ಹುಚ್ಚಿಮಲ್ಲಿ ಗುಡಿ

ಊರಿನ ಉತ್ತರಕ್ಕಿರುವ ಹುಚ್ಚಿಮಲ್ಲಿ ಗುಡಿಯಲ್ಲಿ ಗರ್ಭಗುಡಿ, ಪ್ರದಕ್ಷಿಣಾಪಥ, ಅಂತರಾಳ, ಮಂಟಪ ಮತ್ತು ಮುಖಮಂಟಪಗಳಿವೆ. ಇಲ್ಲಿ ಚಾಳುಕ್ಯ ವಾಸ್ತುಶೈಲಿಯ ಮುಂದಿನ ಹಂತವನ್ನು ಕಾಣುತ್ತೇವೆ. ಮುಖಮಂಟಪದಿಂದ ಮಂಟಪಕ್ಕೆ ಪ್ರವೇಶಿಸುವ ದ್ವಾರದಲ್ಲಿರುವ ದೊಡ್ಡ ಬಾಗಿಲು



ಹುಚ್ಚಿಮಲ್ಲಿ ಗುಡಿ

ಪಾತವು ಒಳ್ಳೆಯ ಕೆತ್ತನೆಯಿಂದ ಕೂಡಿದೆ. ಎಲ್ಲ ಚಾಲುಕ್ಯ ದೇವಾಲಯಗಳಲ್ಲಿರುವಂತೆ ಇಲ್ಲಿಯೂ ನಡುವೆ ಗರುಡನ ಶಿಲ್ಪವಿದೆ. ಸಮೀಪದಲ್ಲಿಯೇ ಗಂಗಾ–ಯಮುನೆಯರ ಶಿಲ್ಪಗಳಿವೆ. ಹುಚ್ಚಿಮಲ್ಲಿಗುಡಿಗೆ ನಾಗರ ಶೈಲಿಯ ಶಿಖರವಿದೆ. ಅಂದರೆ ಇಲ್ಲಿ ದೇವಾಲಯದ ಎಲ್ಲ ಭಾಗಗಳೂ ಸಮಾನವಾಗಿ ರೂಪುಗೊಂಡಂತೆ ತೋರುತ್ತದೆ. ಈ ದೃಷ್ಟಿಯಿಂದ ಹುಚ್ಚಿಮಲ್ಲಿಗುಡಿಯು ಪ್ರಾಮುಖ್ಯತೆಯನ್ನು ಪಡೆದಿದೆ.

ಮೇಗುತಿ ದೇವಾಲಯ

ಇಲ್ಲಿರುವ ಇತರ ಹಿಂದೂ ಗುಡಿಗಳೆಂದರೆ ಜ್ಯೋತಿರ್ಲಿಂಗ, ಗಳಗನಾಥ, ರಾಮಲಿಂಗ, ವೇಣಿ, ಅಂಬಿಗೇರ, ಚಿಕ್ಕೀ ಮುಂತಾದ ಗುಡಿಗಳು. ಇವುಗಳನ್ನು ಬಿಟ್ಟು ಜೈನಧರ್ಮಕ್ಕೆ ಸಂಬಂಧಿಸಿದ ಗುಡಿಗಳಲ್ಲಿ ಅತಿ ಮುಖ್ಯವಾದುದು ಮೇಗುತಿ ದೇವಾಲಯ. ಮೇಲಣಗುಡಿ ಅಂದರೆ ಮೇಲಿರುವ

ಗುಡಿ ಎಂಬುದು ಕಾಲಕ್ರಮದಲ್ಲಿ ಮೇಗುತಿಯಾಗಿದೆ. ಇದು ಕ್ರಿ. ಶ. ೬೩೪ ರಲ್ಲಿ ಖ್ಯಾತ ಚಾಲುಕ್ಯ ದೊರೆ ಇಮ್ಮಡಿ ಪುಲಕೇಶಿಯ ಕಾಲದಲ್ಲಿ ರವಿಕೀರ್ತಿ ಯಿಂದ ರಚಿತವಾಯಿತು. ಈ ದೇವಾಲಯದಲ್ಲಿರುವ ಐಹೊಳೆ ಶಾಸನ ವೆಂದು ಇತಿಹಾಸ ಪ್ರಸಿದ್ಧವಾಗಿರುವ ಪುಲಕೇಶಿಯ ಶಾಸನದಿಂದಲೂ ಈ ದೇವಾಲಯದ ಕೀರ್ತಿ ನೂರ್ಮಡಿಯಾಗಿದೆ. ಈ ಶಾಸನದಿಂದ ಖ್ಯಾತ ಸಂಸ್ಕೃತ ಕವಿಗಳಾದ ಕಾಳಿದಾಸ ಮತ್ತು ಭಾರವಿ ಕ್ರಿ. ಶ. ೬೩೪ ಕ್ಕಿಂತ ಮುಂಚೆಯೇ ಜೀವಿಸಿದ್ದರೆಂದು ತಿಳಿದುಬಂದಿದೆ. ಇಡೀ ಐಹೊಳೆಯಲ್ಲಿಯೇ ಇದು ಬಹು ದೊಡ್ಡದಾದ ದೇವಾಲಯ. ಗರ್ಭಗುಡಿಯ ಮೇಲೆ ಶಿಖರ ವಿಲ್ಲದಿದ್ದರೂ ಎರಡನೆಯ ಅಂತಸ್ತಿನಲ್ಲಿ ಇನ್ನೊಂದು ಗರ್ಭಗೃಹವಿದೆ.

ರಾವಳಫಡಿ

ಕಲ್ಲಿನಿಂದ ಕಟ್ಟಲಾದ ಈ ದೇವಾಲಯಗಳು ಮಾತ್ರವಲ್ಲದೆ ಚಾಲುಕ್ಯರು ಐಹೊಳೆಯಲ್ಲಿ ಬಂಡೆಯಲ್ಲಿ ಕೊರೆಯಲಾದ ಕೆಲವು ಗುಹಾಲಯಗಳನ್ನೂ ನಿರ್ಮಿಸಿದರು. ಇವುಗಳಲ್ಲಿ ಮುಖ್ಯವಾದವು ಎರಡು : ಒಂದು ರಾವಳಫಡಿ ಗುಹಾಲಯ ಮತ್ತೊಂದು ಜಿನಾಲಯ. ಮರಳುಗಲ್ಲಿನ ಗುಡ್ಡವನ್ನೇ ಕೊರೆದು ನಿರ್ಮಿಸಿರುವ ಈ ಗುಹೆಗಳಲ್ಲಿ ಕಂಬದ ಸಾಲುಗಳಿರುವ ಆಯಾ ಕಾರದ ಒಂದು ಹಜಾರ ಮತ್ತು ಒಂದು ಸಣ್ಣ ಗರ್ಭಗೃಹ ಮಾತ್ರವಿರುತ್ತವೆ. ಗೋಡೆಗಳಲ್ಲಿ ಸುಂದರವಾದ ಶಿಲ್ಪಗಳಿರುತ್ತವೆ. ರಾವಳಫಡಿಯು ವಿಸ್ತಾರ ವಾದುದೇನೂ ಅಲ್ಲ. ೩೦ ಅಡಿ ಉದ್ದ, ೨೦ ಅಡಿ ಅಗಲ ಮತ್ತು ೧೦ ಅಡಿ ಎತ್ತರದ ಈ ಗುಹೆಯಲ್ಲಿರುವ ವಿಗ್ರಹಗಳು ಸುಂದರವಾದವು. ಗುಹಾಲಯದ ಬಾಗಿಲಿನಲ್ಲಿ ಶಂಖನಿಧಿ ಮತ್ತು ಪದ್ಮನಿಧಿಯರ ವಿಗ್ರಹಗಳಿವೆ. ಅರ್ಧನಾರೀಶ್ವರ, ಹರಿಹರ, ಮಹಿಷಾಸುರಮರ್ದಿನಿ, ಗಂಗಾಧರ, ನಟರಾಜನ ಶಿಲ್ಪಗಳು ಗಮನಾರ್ಹ. ಜೈನ ಗುಹೆಯಲ್ಲಿ ಎಡ ಹಾಗೂ ಬಲ ಭಾಗಗಳಲ್ಲಿ ಜೈನತೀರ್ಥಂಕರರ ವಿಗ್ರಹಗಳಿವೆ. ಪ್ರಧಾನ ದೇವನಾದ ಮಹಾವೀರನು ಸಿಂಹಾಸನದಲ್ಲಿ ಪದ್ಮಾಸನದಲ್ಲಿ ಕುಳಿತಿದ್ದಾನೆ. ಇವನ ಇಕ್ಕೆಲಗಳಲ್ಲಿ ನಾಗ ರಾಜರು ಭಕ್ತಿಯಿಂದ ನಿಂತಿದ್ದಾರೆ. ಪಡಸಾಲೆಯಲ್ಲಿ ಪಾರ್ಶ್ವನಾಥ ಮತ್ತು

ಬಾಹುಬಲಿಗಳ ವಿಗ್ರಹಗಳಿವೆ. ಇತ್ತೀಚೆಗೆ ಬೌದ್ಧ ಆಲಯವೊಂದು ಐಹೊಳೆಯಲ್ಲಿ ಬೆಳಕಿಗೆ ಬಂದಿದೆ. ಇದು ಅರ್ಧ ಕೊರೆಯಲಾದ ಮತ್ತು ಅರ್ಧ ಕಟ್ಟಲಾದ ಕಟ್ಟಡ

ಬಾದಾಮಿ

ಐಹೊಳೆಯಲ್ಲಿ ಆರಂಭವಾದ ಚಾಲುಕ್ಯರ ವಾಸ್ತುಶಿಲ್ಪವು ಬೆಳವಣಿಗೆಯನ್ನು ತೋರಿದ್ದುದು ಅವರ ರಾಜಧಾನಿಯಾದ ಬಾದಾಮಿಯಲ್ಲಿ. ಇಲ್ಲಿ ಅದರ ಎರಡನೆಯ ಹಂತವನ್ನು ಕಾಣಬಹುದು. ಐಹೊಳೆಯಂತೆ ಇಲ್ಲಿಯೂ ಕಟ್ಟಲಾದ ದೇವಾಲಯಗಳು ಮತ್ತು ಕೊರೆಯಲಾದ ಗುಹಾಲಯಗಳಿವೆ. ಒಂದು ದೃಷ್ಟಿಯಲ್ಲಿ ಬಾದಾಮಿಯು ಕಟ್ಟಲಾದ ದೇವಾಲಯಗಳಿಗಿಂತ ಕಲ್ಲಿನಲ್ಲಿ ಕೊರೆಯಲಾದ ಗುಹಾಲಯಗಳಿಗೇ ಹೆಚ್ಚು ಪ್ರಸಿದ್ಧಿಯಾಗಿದೆ. ಕಲ್ಲಿನಿಂದ ಕಟ್ಟಲಾದ ದೇವಾಲಯಗಳಲ್ಲಿ ಬಾದಾಮಿಯಲ್ಲಿ ಮುಖ್ಯವಾದವು ಮೇಲಿನ ಶಿವಾಲಯ, ಕೆಳಗಿನ ಶಿವಾಲಯ ಮತ್ತು ಜಂಬುಲಿಂಗನ ಗುಡಿ. ಎತ್ತರವಾದ ಬಂಡೆಯ ಮೇಲಿರುವ ಮೇಲಿನ ಶಿವಾಲಯಕ್ಕೆ ಮಾಲೆಗಿತ್ತಿ ಶಿವಾಲಯ ಎಂದೂ ಹೆಸರು. ಸುಮಾರು ಕ್ರಿ. ಶ. ಏಳನೆಯ ಶತಮಾನದ ಈ ದೇಗುಲದಲ್ಲಿ ಗರ್ಭಗುಡಿ, ಮಂಟಪ ಮತ್ತು ಮುಖಮಂಟಪಗಳಿವೆ. ಗರ್ಭಗುಡಿಯ ಬಾಗಿಲುವಾಡ ಬಲು ಕಲಾತ್ಮಕವಾಗಿದೆ. ಇದು ನಾಗರಶೈಲಿಯ ಶಿಖರವನ್ನು ಹೊಂದಿದೆ. ಕೆಳಗಿನ ಶಿವಾಲಯವು ಮಾತ್ರ ದ್ರಾವಿಡ ರೀತಿಯ ಶಿಖರವನ್ನು ಹೊಂದಿದೆ. ಜಂಬುಲಿಂಗನ ಗುಡಿಯು ಒಂದು ತ್ರಿಕೂಟಾಚಲ. ಏಕೆಂದರೆ ಒಂದೇ ದೇವಾಲಯದಲ್ಲಿ ಮೂರು ಗರ್ಭಗೃಹಗಳಿವೆ. ಈ ಮೂರು ಗರ್ಭಗೃಹಗಳಲ್ಲಿಯೂ ಬೇರೆ ಬೇರೆ ದೇವರುಗಳನ್ನು ಪ್ರತಿಷ್ಠಿಸಿದ್ದಾರೆ. ಬಹುಶಃ ಇದು ಬ್ರಹ್ಮ, ವಿಷ್ಣು ಮತ್ತು ಈಶ್ವರರಿಗೋಸ್ಕರ ಕಟ್ಟಿಸಿದ್ದಿರಬೇಕು. ಎಲ್ಲ ದೇವರುಗಳೂ ಒಂದೇ ಎಂಬ ಉದಾತ್ತ ಧಾರ್ಮಿಕ ಭಾವನೆಯನ್ನು ಜನಗಳಲ್ಲಿ ಬೆಳಸಲು ಈ ರೀತಿಯ ಗುಡಿಗಳು ಉತ್ತಮ ಸಾಧನಗಳು. ಈ ದೇವಾಲಯದಲ್ಲಿರುವ ಕ್ರಿ. ಶ. ೬೯೯ರ ಶಾಸನದ ಪ್ರಕಾರ ಚಾಲುಕ್ಯ ದೊರೆ ವಿಜಯಾದಿತ್ಯನ ರಾಜಮಾತೆಯಾದ ವಿನಯವತಿಯು

ಸುಂಕದ ಆದಾಯವನ್ನು ಈ ದೇವಾಲಯದಲ್ಲಿ ಪೂಜೆಗೋಸ್ಕರ ಬಿಟ್ಟುಕೊಡು ವಂತೆ ಆಜ್ಞೆ ಮಾಡಿದ್ದಳೆಂದು ತಿಳಿದು ಬರುತ್ತದೆ.

ಮೇಣದ ಬಸ್ತಿ

ಮೇಣದ ಬಸ್ತಿಗಳು ಎಂದು ಜನಸಾಮಾನ್ಯರಿಂದ ಕರೆಯಲಾಗುವ ನಾಲ್ಕು ಗುಹಾಲಯಗಳು ಬಾದಾಮಿಯಲ್ಲಿ ಹೆಚ್ಚು ಖ್ಯಾತಿಯನ್ನು ಪಡೆದಿವೆ. ಇವುಗಳಲ್ಲಿ ಮೊದಲನೆಯದು ಶೈವ; ಎರಡು ಮತ್ತು ಮೂರನೆಯವು ವೈಷ್ಣವ; ಕೊನೆಯದು ಜೈನ ಗುಹೆ. ಈ ಗುಹಾಲಯಗಳನ್ನು ನೈಸರ್ಗಿಕ ವಾದ ಗುಡ್ಡವನ್ನೇ ಕೊರೆದು ತಯಾರಿಸಿದ್ದಾರೆ. ಇಲ್ಲಿ ಸಾಮಾನ್ಯವಾಗಿ ಕಂಬಗಳುಳ್ಳ ಮಂಟಪ ಮತ್ತು ಅದರ ಹಿಂದೆ ಗರ್ಭಗೃಹವಿದೆ. ಇಲ್ಲಿ ವಾಸ್ತುವಿಗಿಂತ ಶಿಲ್ಪಕ್ಕೇ ಹೆಚ್ಚು ಪ್ರಾಮುಖ್ಯತೆ. ಶೈವ, ವೈಷ್ಣವ ಮತ್ತು ಜೈನ ದೇಗುಲಗಳು ಒಂದರ ಪಕ್ಕದಲ್ಲಿ ಮತ್ತೊಂದು ಇರುವುದು ಆಗಿನ ಕಾಲದ ಜನಗಳ ಮತ್ತು ರಾಜರ ಮತ ಸಮನ್ವಯಕ್ಕೆ ಉತ್ತಮ ಉದಾಹರಣೆ. ಎಲ್ಲ ವಿವಿಧ ಧರ್ಮಗಳನ್ನೂ ಸಮಾನ ಗೌರವದಿಂದ ಕಾಣಬೇಕೆನ್ನುವ ಪಾಠ ವನ್ನು ನಾವು ಈ ಕೃತಿಗಳಿಂದ ಕಲಿಯಬೇಕು.

ನಟರಾಜ

ಈ ಗುಹಾಲಯಗಳಲ್ಲಿರುವ ಸುಂದರ ಶಿಲ್ಪಗಳು ನಮ್ಮ ಗಮನವನ್ನು ಸೆಳೆಯುತ್ತವೆ. ಒಂದೊಂದು ಶಿಲ್ಪವೂ ಒಂದು ಮಹಾಕೃತಿಯಾಗಿದ್ದು ಚಾಲುಕ್ಯ ಶಿಲ್ಪಿಗಳ ಕೈಚಳಕವನ್ನು ಪ್ರದರ್ಶಿಸುತ್ತಿವೆ. ಮೊದಲನೆಯ ಗುಹೆಯಲ್ಲಿರುವ ಶಿವನಟರಾಜನ ಶಿಲ್ಪವನ್ನು ನೋಡೋಣ. ಹದಿನೆಂಟು ಕೈಗಳಿರುವ ನಟರಾಜನು ಪ್ರತಿಯೊಂದು ಕೈಯಲ್ಲಿಯೂ ತ್ರಿಶೂಲ, ಡಮರು, ಪರಶು, ಹಾವು ಮುಂತಾದವುಗಳನ್ನು ಹಿಡಿದಿದ್ದಾನೆ. ನರ್ತಿಸುತ್ತಿರುವ ಶಿವನ ಬಲಗಡೆ ಗಣಪತಿ ನಿಂತಿದ್ದಾನೆ. ಸ್ವಲ್ಪ ಪಕ್ಕದಲ್ಲಿ ಕಾಣಬರುವುದು ಶಿವನ ಅರ್ಧನಾರೀಶ್ವರ ಮೂರ್ತಿ. ಶಿವನ ಬಲಭಾಗ ಪುರುಷರೂಪಿಯಾಗಿಯೂ, ಎಡಗಡೆ ಸ್ತ್ರೀರೂಪಿಯಾಗಿಯೂ ಇರುವ ಈ ಮೂರ್ತಿಯು, ಈಶ್ವರ—ಪಾರ್ವತಿಯರ ಸಂಯೋಗಮೂರ್ತಿ.



ಬಾದಾಮಿಯ ಮೊದಲನೆಯ ಗುಹೆ (ಶೈವಗುಹೆ) ನಟರಾಜನ ವಿಗ್ರಹ

ಪುರುಷ ಮತ್ತು ಸ್ತ್ರೀ ಸಮಾನರೆಂಬ ತತ್ವವನ್ನು ಈ ಮೂರ್ತಿಯು ಸಾರು ವಂತಿದೆ. ಇನ್ನೂ ಸ್ವಲ್ಪ ಆಕಡೆ ಕಾಣುವುದೇ ಹರಿಹರನ ಸುಂದರ ಮೂರ್ತಿ. ವಿಷ್ಣುವೂ ಶಿವನೂ ಬೇರೆಯಲ್ಲ ; ಇಬ್ಬರೂ ಒಂದೇ ದೈವ ಎಂಬ ತತ್ವವನ್ನು ತಿಳಿಸುವ ಸಲುವಾಗಿ ಕಡೆಯಲಾದ ಮೂರ್ತಿ. ಈ ಮೂರ್ತಿಯ ಬಲಭಾಗ ಶಿವ. ತ್ರಿಶೂಲ, ಸರ್ಪ ಮತ್ತು ಕೊಡಲಿಗಳನ್ನು ಹಿಡಿದು ನಂದಿಯಿಂದ ಸೇವಿಸಲ್ಪಡುತ್ತಿರುವ ಈ ಮೂರ್ತಿಯ ಎಡಭಾಗದಲ್ಲಿ ವಿಷ್ಣುವಿದ್ದಾನೆ. ವಿಷ್ಣುವಿನ ಕೈನಲ್ಲಿ ಶಂಖವಿದೆ. ಪಕ್ಕದಲ್ಲಿ ಗರುಡ ನಿದ್ದಾನೆ. ಶಿವನ ಪಕ್ಕದಲ್ಲಿ ಪಾರ್ವತಿ, ವಿಷ್ಣುವಿನ ಪಕ್ಕದಲ್ಲಿ ಲಕ್ಷ್ಮಿ ನಿಂತಿದ್ದಾರೆ.

ವರಾಹ

ಈ ಗುಹೆಯ ಪಕ್ಕದಲ್ಲಿರುವುದೇ ಎರಡನೆಯ ವೈಷ್ಣವ ಗುಹೆ. ಇಲ್ಲಿ ವಿಷ್ಣುವಿಗೆ ಸಂಬಂಧಿಸಿದ ಸುಂದರ ಮೂರ್ತಿಗಳಿವೆ. ಕೈಸಾಲೆಯ ಬಲಗೋಡೆಯ ಮೇಲಿರುವ ವರಾಹಾವತಾರದ ಶಿಲ್ಪ ನಮ್ಮನ್ನು ಮೊದಲು ಎದುರುಗೊಳ್ಳುತ್ತದೆ. ಬಹು ಹಿಂದೆ ಜಲಪ್ರಳಯವಾದಾಗ ಭೂದೇವಿಯು ಮುಳುಗಿ ಹೋಗಲು, ವಿಷ್ಣುವು ವರಾಹದ ಅವತಾರವನ್ನು ತಾಳಿ ಭೂದೇವಿ ಯನ್ನು ತನ್ನ ಕೋರೆ ಹಲ್ಲುಗಳಿಂದ ಸಂರಕ್ಷಿಸಿದನು. ಇದರ ಎದುರಿಗಿರು ವುದೇ ವಾಮನಾವತಾರದ ಶಿಲ್ಪ. ಕುಳ್ಳಗಿರುವ ವಟು ಒಬ್ಬನು ಬಲಿ ಚಕ್ರವರ್ತಿಯಲ್ಲಿಗೆ ಹೋಗಿ ತನಗೆ ಮೂರು ಹೆಜ್ಜೆ ಭೂಮಿಯನ್ನು ದಾನ ವಾಗಿ ಕೇಳುತ್ತಾನೆ. ಬಲಿಚಕ್ರವರ್ತಿಯು ಒಪ್ಪಿಗೆ ಕೊಟ್ಟ ಕೂಡಲೆ ಸಣ್ಣ ಬಾಲಕನು ಒಂದು ಹೆಜ್ಜೆಯಿಂದ ಆಕಾಶವನ್ನೂ ಮತ್ತೊಂದು ಹೆಜ್ಜೆಯಿಂದ ಭೂಮಿಯನ್ನೂ ಅಳೆಯುತ್ತಾನೆ. ಮೂರನೆಯ ಹೆಜ್ಜೆಗೆ ಎಡೆ ಎಲ್ಲಿ ಎಂದು ಕೇಳಿದಾಗ ಬಲಿಚಕ್ರವರ್ತಿಯು ತನ್ನ ತಲೆಯನ್ನೇ ತೋರಿಸುತ್ತಾನೆ. ಈ ಕಥೆಯು ಸುಂದರವಾಗಿ ಶಿಲ್ಪಿತವಾಗಿದೆ ಇಲ್ಲಿ.

ಇಲ್ಲಿ ನೋಡಬೇಕಾದದು ಮತ್ತೊಂದು ದೊಡ್ಡ ಶಿಲ್ಪ. ಅದೇ ನರಸಿಂಹ. ಸಿಂಹದ ಆಕಾರದ ಮುಖ, ಮನುಷ್ಯನ ಆಕಾರದ ಕೈಕಾಲು ಗಳುಳ್ಳ ಈ ಶಿಲ್ಪ ಸುಂದರವಾಗಿದೆ.

ಜೈನಗುಹೆ

ಇನ್ನು ಕೊನೆಯ ಜೈನ ಗುಹೆಯನ್ನು ಪ್ರವೇಶಿಸೋಣ. ಇಲ್ಲಿಯೂ ಸುಂದರ ಶಿಲ್ಪಗಳಿವೆ. ಅವು ಜೈನ ದೇವತೆಗಳು. ಗರ್ಭಗುಡಿಯಲ್ಲಿರುವುದು ಆದಿನಾಥ ತೀರ್ಥಂಕರರ ಕುಳಿತಿರುವ ಶಿಲ್ಪ. ಸಿಂಹಪೀಠದ ಮೇಲೆ ಕುಳಿತಿರುವ ಆದಿನಾಥಸ್ವಾಮಿಗೆ ಯಕ್ಷರು ಚಾಮರಗಳನ್ನು ಬೀಸುತ್ತಿದ್ದಾರೆ. ತೀರ್ಥಂಕರನ ಮೇಲೆ ಮುಕ್ಕೊಡೆಗಳಿವೆ. ಗರ್ಭಗುಡಿಯ ಹೊರಗಿನ ಕೈಸಾಲೆಯಲ್ಲಿ ಪಶ್ಚಿಮದ ಗೋಡೆಯಲ್ಲಿ ಸುಪಾರ್ಶ್ವನಾಥನ ದಿಗಂಬರ ಶಿಲ್ಪವಿದೆ. ಪಕ್ಕದಲ್ಲಿ ಯಕ್ಷ–ಯಕ್ಷಿಣಿಯರಿದ್ದಾರೆ. ತಲೆಯ ಮೇಲೆ ಐದು ಹೆಡೆಯ ಸರ್ಪವಿದೆ. ಈ ವಿಗ್ರಹದ ಎದುರಿಗೆ ಕಾಣುವುದೇ ಬಾಹುಬಲಿ. ತಪಸ್ಸು ಮಾಡುತ್ತ ನಿಂತಿರುವ ಬಾಹುಬಲಿಯ ಕೈಕಾಲುಗಳಿಗೆ ಬಳ್ಳಿಗಳು ಸುತ್ತಿಕೊಂಡಿವೆ. ನಾವು ಆಗಲೇ ಗಮನಿಸಿದಂತೆ ಬಾದಾಮಿ ಗುಹಾಲಯಗಳ ಶಿಲ್ಪಗಳು ಬಲು ಸುಂದರವಾದವು.

ವರ್ಣಚಿತ್ರ

ಬಾದಾಮಿಯ ಮೂರನೆಯ ಗುಹಾಲಯದಲ್ಲಿ ವರ್ಣಚಿತ್ರಗಳು ಇರುವುದು ಮತ್ತೊಂದು ಮಹತ್ವದ ಸಂಗತಿ. ಬಹುತೇಕ ಹಾಳಾಗಿದ್ದರೂ, ಬಾದಾಮಿ ಚಾಲುಕ್ಯರ ಕಾಲದ ಚಿತ್ರಕಲೆಗೆ ಸಾಕ್ಷಿಯಂತಿರುವ ಈ ಚಿತ್ರಗಳನ್ನು ಗಮನಿಸಬೇಕು. ಇಲ್ಲಿ ರಾಜನ ದರಬಾರಿನ ಚಿತ್ರವೊಂದಿದೆ. ಅವನ ಮುಂಭಾಗದಲ್ಲಿ ರಾಣಿಯಿದ್ದಾಳೆ. ಎಡಭಾಗದಲ್ಲಿ ನರ್ತಕಿಯರು, ವಾದ್ಯಕಾರರೂ ಇದ್ದಾರೆ. ದೂರದಲ್ಲಿ ಪ್ರೇಕ್ಷಕರಿದ್ದಾರೆ. ಇದೇ ರೀತಿಯ ಇನ್ನೊಂದು ಚಿತ್ರದಲ್ಲಿ ಸಿಂಹಾಸನದ ಮೇಲೆ ಕುಳಿತಿರುವ ರಾಜನು ಇದ್ದಾನೆ. ಇವನು ಚಾಲುಕ್ಯದೊರೆ ಕೀರ್ತಿವರ್ಮನಿರಬಹುದೆಂದು ಊಹೆ. ಇನ್ನೆರಡು ಚಿತ್ರಗಳಲ್ಲಿ ಹಾರುತ್ತಿರುವ ಗಂಧರ್ವ ದಂಪತಿಗಳು ಚಿತ್ರಿತರಾಗಿದ್ದಾರೆ. ಈ ಚಿತ್ರಗಳು ನೋಡಲು ಆಕರ್ಷಕವಾಗಿರುವುದು ಮಾತ್ರವಲ್ಲದೆ, ತಾಂತ್ರಿಕ ದೃಷ್ಟಿಯಿಂದಲೂ ಗಮನಾರ್ಹವಾಗಿವೆ.



ಬಾದಾಮಿ ಗುಹೆಯಲ್ಲಿನ ಜೈನಶಿಲ್ಪ

ಪಟ್ಟದಕಲ್ಲು

ಬಾದಾಮಿ ಚಾಲುಕ್ಯ ವಾಸ್ತುಶಿಲ್ಪದ ಮುಂದಿನ ಹಂತವನ್ನು ಕಾಣುವುದು ಪಟ್ಟದಕಲ್ಲಿನಲ್ಲಿ. ಇಂದು ಸಣ್ಣ ಕುಗ್ರಾಮವಾಗಿದ್ದರೂ, ಒಂದು ಕಾಲದಲ್ಲಿ ವೈಭವದಿಂದ ಮೆರೆದ, ಮತ್ತು ಕರ್ನಾಟಕದ ವಾಸ್ತುಶಿಲ್ಪದ ತವರಾಗಿದ್ದ ಪಟ್ಟದಕಲ್ಲು ಗತವೈಭವವನ್ನು ಸಾರಿಹೇಳುತ್ತದೆ. ಪಟ್ಟದಕಲ್ಲಿನಲ್ಲಿ ಹತ್ತಾರು ದೇವಾಲಯಗಳಿದ್ದರೂ ಅವುಗಳಲ್ಲಿ ಮುಖ್ಯವಾದವು ಹತ್ತು. ಈ ಹತ್ತು ದೇವಾಲಯಗಳಲ್ಲಿ ನಾಲ್ಕು ದೇವಾಲಯಗಳು ನಾಗರಶೈಲಿಯಲ್ಲಿವೆ. ಮಿಕ್ಕವು ದ್ರಾವಿಡಶೈಲಿಯಲ್ಲಿವೆ.

ಪಾಪನಾಥ

ನಾಗರಶೈಲಿಯ ದೇವಾಲಯಗಳಲ್ಲಿ ಪಾಪನಾಥ ಗುಡಿಯು ಬಲು ದೊಡ್ಡದು ಮತ್ತು ಮುಖ್ಯವಾದುದು. ಸುಮಾರು ಕ್ರಿ.ಶ. ೬೮೦ರ ವೇಳೆಗೆ ಈ ದೇವಾಲಯ ನಿರ್ಮಾಣವಾಗಿರಬೇಕು. ವಾಸ್ತುಶಿಲ್ಪ ಇನ್ನೂ ಅಷ್ಟಾಗಿ ಮುಂದುವರೆದಿಲ್ಲ. ಅಂದರೆ ದೇವಾಲಯರಚನೆ ಇನ್ನೂ ನಿಶ್ಚಿತ ರೂಪವನ್ನು ತಾಳಿರಲಿಲ್ಲವೆಂದು ತೋರುತ್ತದೆ. ತೊಂಭತ್ತು ಅಡಿ ಉದ್ದದ ಈ ದೇವಾಲಯಕ್ಕೆ ಇರುವ ಶಿಖರ ಬಲು ಸಣ್ಣದು. ಗುಹಾಲಯ ರಚನಾತಂತ್ರ ಎದ್ದು ಕಾಣುತ್ತದೆ. ಗರ್ಭಗುಡಿ, ಸುಕನಾಸಿ, ಪ್ರದಕ್ಷಿಣಪಥ, ಹೊರ ಮಂಟಪಗಳನ್ನುಳ್ಳ ಪಾಪನಾಥ ದೇಗುಲದ ಹೊರಭಾಗದಲ್ಲಿಯೂ ಹತ್ತಾರು ಶಿಲ್ಪಗಳಿವೆ. ಉತ್ತರ ದಿಕ್ಕಿನ ಗೋಡೆಯಲ್ಲಿ ಅರ್ಜುನನು ಒಂಟಿಗಾಲಿನ ಮೇಲೆ ನಿಂತು ತಪಸ್ಸು ಮಾಡುತ್ತಿರುವುದು. ರಾವಣನು ಕೈಲಾಸಪರ್ವತವನ್ನು ಅಲುಗಿಸುತ್ತಿರುವುದು. ಮಹಿಷಾಸುರಮರ್ದಿನಿ, ನೃತ್ಯಗಣಪತಿ, ನಟರಾಜ, ಹಿರಣ್ಯಕಶಿಪುವನ್ನು ಸಂಹಾರ ಮಾಡುತ್ತಿರುವ ನರಸಿಂಹ ಮುಂತಾದ ಶಿಲ್ಪಗಳಿವೆ. ರಾವಣನು ಕೈಲಾಸ ಪರ್ವತವನ್ನು ಎತ್ತುವ ದೃಶ್ಯ ಸುಂದರವಾಗಿದೆ. ತನ್ನ ಹತ್ತು ತಲೆ ಮತ್ತು ಇಪ್ಪತ್ತು ಕೈಗಳಿಂದ ರಾವಣನು ಕೈಲಾಸವನ್ನು ಅಲುಗಿಸುತ್ತಿದ್ದಾನೆ. ಗಣಗಳು ಮತ್ತು ಗಂಧರ್ವರು ಹೆದರಿ



ಪಾಪನಾಥ ದೇವಾಲಯ, ಪಟ್ಟದಕಲ್ಲು

ದ್ದಾರೆ. ಈಶ್ವರನ ಪಕ್ಕದಲ್ಲಿ ಕುಳಿತಿರುವ ಪಾರ್ವತಿಯೂ ಕೂಡ ಹೆದರಿ ಈಶ್ವರನನ್ನು ಬಿಗಿಯಾಗಿ ಹಿಡಿದಿದ್ದಾಳೆ. ಆದರೆ ನಿರ್ಭೀತನಾಗಿ ಶಿವನು ಮುಗುಳುನಗೆಯಿಂದ ರಾವಣನ ಆಟವನ್ನು ಗಮನಿಸುತ್ತಿದ್ದಾನೆ.

ರಾಮಾಯಣ

ದಕ್ಷಿಣದ ಗೋಡೆಯಲ್ಲಿ ರಾಮಾಯಣದ ಕಥೆಯು ಶಿಲ್ಪಿತವಾಗಿದೆ. ವಿಶ್ವಾಮಿತ್ರ ವಸಿಷ್ಠರು, ದಶರಥನ ಯಾಗ, ವಿಶ್ವಾಮಿತ್ರರು ರಾಮಲಕ್ಷಣರನ್ನು ವಿದ್ಯಾಭ್ಯಾಸಕ್ಕೆ ಕರೆದುಕೊಂಡು ಹೋಗುವುದು ; ರಾಮನು ತಾಟಕಿಯನ್ನು ಸಂಹಾರ ಮಾಡುವುದು ; ವಿಶ್ವಾಮಿತ್ರನು ರಾಮನನ್ನು ಸೀತಾ ಸ್ವಯಂವರಕ್ಕೆ ಕರೆದುಕೊಂಡು ಹೋಗುವುದು ; ವನವಾಸಕ್ಕೆ ಹೊರಟ


ರಾಮ, ಲಕ್ಷ್ಮಣ ಮತ್ತು ಸೀತೆ: ಹೀಗೆ ಕೆತ್ತಲ್ಪಟ್ಟಿವೆ. ಪೂರ್ವದ ಗೋಡೆಯಲ್ಲಿ ಪಟ್ಟಾಭಿಷೇಕದ ಶಿಲ್ಪವಿದೆ.

ಪಟ್ಟದಕಲ್ಲಿನಲ್ಲಿರುವ ಇತರ ನಾಗರಶೈಲಿಯ ದೇವಾಲಯಗಳೆಂದರೆ ಜಂಬುಲಿಂಗ, ಕರಿಸಿದ್ಧೇಶ್ವರ ಮತ್ತು ಕಾಶಿ ವಿಶ್ವನಾಥ ದೇವಾಲಯಗಳು. ಇವೆಲ್ಲವೂ ಸಣ್ಣ ದೇವಾಲಯಗಳು. ಇನ್ನು ದ್ರಾವಿಡಶೈಲಿಯ ದೇಗುಲಗಳನ್ನು ನೋಡೋಣ.

ವಿರೂಪಾಕ್ಷ ದೇವಾಲಯ

ದ್ರಾವಿಡಶೈಲಿಯ ದೇವಾಲಯಗಳಲ್ಲಿ ಅತಿ ಮುಖ್ಯವಾದುದು ವಿರೂಪಾಕ್ಷ ದೇವಾಲಯ. ಕ್ರಿ. ಶ. ೭೪೦ರಲ್ಲಿ ನಿರ್ಮಿಸಲಾದ ಈ ದೇವಾಲಯದಲ್ಲಿ ದ್ರಾವಿಡಶೈಲಿಯ ಪ್ರಭಾವ ಎದ್ದು ಕಾಣುತ್ತದೆ. ಚಾಲುಕ್ಯರಾಜ ಎರಡನೆಯ ವಿಕ್ರಮಾದಿತ್ಯನು ಪಲ್ಲವರನ್ನು ಸೋಲಿಸಿ ಕಾಂಚಿಯನ್ನು ಗೆದ್ದಾಗ, ಅಲ್ಲಿನ ದೇವಾಲಯಗಳ ಸೊಬಗಿಗೆ ಮಾರುಹೋಗಿ, ಅಲ್ಲಿಂದ ಶಿಲ್ಪಿಗಳನ್ನು ಕರೆದುಕೊಂಡು ಬಂದು ಅವರ ನೇತೃತ್ವದಲ್ಲಿ ಈ ದೇಗುಲವನ್ನು ನಿರ್ಮಿಸಿರಬೇಕು. ಸೂತ್ರಧಾರಿ ಅನಿವಾರಿತ ಗುಂಡನು ತನ್ನ ಸಹಶಿಲ್ಪಿಗಳೊಡನೆ ಸೇರಿ ಈ ದೇವಾಲಯವನ್ನು ಕಟ್ಟಿದನೆಂದು ಶಾಸನದಿಂದ ತಿಳಿಯಬರುತ್ತದೆ.

ಈ ದೇವಾಲಯದ ಪ್ರಮಾಣವೂ ದೊಡ್ಡದೇ. ೨೨೪ ಅಡಿ ಉದ್ದ, ೧೦೫ ಅಡಿ ಅಗಲದ ಈ ದೇವಾಲಯದಲ್ಲಿ ಗರ್ಭಗುಡಿ, ಪ್ರದಕ್ಷಿಣಾಪಥ, ಮಹಾಮಂಟಪ, ಮುಖ ಮಂಟಪ, ಪ್ರತ್ಯೇಕವಾದ ನಂದಿಮಂಟಪಗಳಿವೆ. ಗರ್ಭಗುಡಿಯ ಮೇಲೆ ದ್ರಾವಿಡ ರೀತಿಯ ಶಿಖರವಿದೆ. ಕಾಂಚಿಯ ರಾಜಸಿಂಹೇಶ್ವರ ದೇವಾಲಯವನ್ನು ಈ ಗುಡಿಯು ಹೋಲುತ್ತದೆ. ವಾಸ್ತುಶಿಲ್ಪದ ದೃಷ್ಟಿಯಿಂದ ಕಲೆಯ ಬೆಳವಣಿಗೆಯು ನಿಶ್ಚಿತ ಘಟ್ಟವನ್ನು ತಲುಪಿದಂತೆ ಕಾಣಬರುತ್ತದೆ. ಗರ್ಭಗುಡಿ, ಮಂಟಪ ಮುಂತಾದ ಭಾಗಗಳ ಜೋಡಣೆಯಲ್ಲಿ ಒಂದು ಕ್ರಮವಿದೆ. ಗುಡಿಯ ಹೊರಭಾಗದಲ್ಲಿರುವ ಶಿಲ್ಪಗಳ ಗುಂಪು ಕಟ್ಟಡಕ್ಕೆ ಒಂದು ರಮಣೀಯತೆಯನ್ನು ಒದಗಿಸಿದೆ. ಹಾಗೆ ನೋಡುವುದಾದರೆ ವಾಸ್ತು ಮತ್ತು ಶಿಲ್ಪ ಕಲೆಗಳೆರಡೂ ಇಲ್ಲಿ ಒಂದಕ್ಕೊಂದು



ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು

ಪೂರಕವಾಗಿವೆ. ಇಲ್ಲಿನ ಜೀವಕಳೆ ತುಂಬಿದ ಮೂರ್ತಿಗಳು ಒಂದೊಂದೂ ಮಹತ್ ಕೃತಿಗಳಾಗಿವೆ. ಇಲ್ಲಿರುವ ನೂರಾರು ಸುಂದರ ಶಿಲ್ಪಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಗಮನಿಸಬಹುದು.

ಸೂರ್ಯ

ಅರ್ಧ ಮಂಟಪದ ಪೂರ್ವದಲ್ಲಿರುವ ಸೂರ್ಯನ ಮೂರ್ತಿಯನ್ನು ನೋಡೋಣ. ಸೂರ್ಯನು ಬರಿಗಾಲಿನಲ್ಲಿ ರಥದಲ್ಲಿ ನಿಂತಿದ್ದಾನೆ. ಎರಡು ಕೈಗಳಲ್ಲಿ ಕಮಲಪುಷ್ಪಗಳಿವೆ. ಪಕ್ಕದಲ್ಲಿ ಉಷೆ ಮತ್ತು ಪ್ರತ್ಯುಷೆಯರು ಬಿಲ್ಲು ಹಿಡಿದುಕೊಂಡು ಬಾಣ ಪ್ರಯೋಗ ಮಾಡಲು ಸಿದ್ಧರಾಗಿದ್ದಾರೆ. ಕೆಳಗೆ ಅರುಣನು ರಥವನ್ನು ಹೊಡೆಯುತ್ತಿದ್ದಾನೆ. ರಥಕ್ಕೆ ಕಟ್ಟಿರುವ ಏಳು ಕುದುರೆಗಳೂ ಸುಂದರವಾಗಿವೆ. ಅಕ್ಕ ಪಕ್ಕದಲ್ಲಿ ಗಂಧರ್ವರು ಇದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಸೂರ್ಯನದು ಸುಂದರ ಶಿಲ್ಪಗಳಲ್ಲೊಂದು.

ದಂಪತಿಗಳು

ರಸಿಕ ದಂಪತಿಗಳ ಶಿಲ್ಪಗಳು ಪಟ್ಟದಕಲ್ಲಿನ ಈ ದೇವಾಲಯದಲ್ಲಿ ಹೆಚ್ಚಾಗಿವೆ. ಆ ಕಾಲದ ಉಡುಗೆ ತೊಡುಗೆ, ಆಭರಣಗಳು ಮುಂತಾದವುಗಳನ್ನು ತಿಳಿಯಲು ಇವು ಬಲು ಸಹಕಾರಿ. ಒಂದು ಕಡೆ ಕೋತಿಗೆ ಹೆದರಿದ ಹೆಂಡತಿಯನ್ನು ಎಡಗೈಯಿಂದ ಹಿಡಿದಿರುವ ಗಂಡನ ಶಿಲ್ಪ ಸುಂದರವಾಗಿ ಮೂಡಿಬಂದಿದೆ. ಅದರ ಪಕ್ಕದಲ್ಲಿರುವ ಗಂಡಸಿನ ಶಿಲ್ಪದ ಪೇಟ, ಹೆಂಗಸಿನ ಎತ್ತರವಾದ ತುರುಬು ನಮ್ಮನ್ನು ಆಕರ್ಷಿಸುತ್ತದೆ.

ದ್ವಾರಪಾಲಕ ವಿಗ್ರಹ ಈ ದೇವಾಲಯದಲ್ಲಿ ಬಲು ಸುಂದರವಾಗಿದೆ. ಅವನು ನಿಂತ ಭಂಗಿ, ಅವನ ಕೈಕಾಲುಗಳ ಮಾಟ, ಅವನು ತನ್ನ ಕೆಲಸದಲ್ಲಿ ಏಕಾಗ್ರತೆಯಿಂದ ಆಸಕ್ತನಾಗಿರುವುದನ್ನು ತೋರಿಸುತ್ತದೆ. ಶಿವನ ನೂರಾರು ಲೀಲೆಗಳನ್ನು ತೋರಿಸುವ ಶಿಲ್ಪಗಳಂತೂ ಬೇಕಾದಷ್ಟಿವೆ. ಆಗಲೇ ಹೇಳಿದಂತೆ ವಾಸ್ತುರಚನೆ ಮತ್ತು ಶಿಲ್ಪಸೌಂದರ್ಯ—ಈ ಎರಡು ದೃಷ್ಟಿಗಳಿಂದಲೂ ವಿರೂಪಾಕ್ಷ ದೇವಾಲಯ ಗಮನಾರ್ಹವಾದುದು.

ಮಲ್ಲಿಕಾರ್ಜುನ

ಇಷ್ಟೇ ಪ್ರಾಮುಖ್ಯತೆಯ ಮತ್ತೊಂದು ದೇವಾಲಯವೆಂದರೆ ಮಲ್ಲಿಕಾರ್ಜುನ ದೇವಾಲಯ. ಎರಡನೆಯ ವಿಕ್ರಮಾದಿತ್ಯನ ರಾಣಿ ತ್ರೈಲೋಕ್ಯ ಮಹಾದೇವಿಯು ಈ ದೇವಾಲಯ ನಿರ್ಮಾಣಕ್ಕೆ ಕಾರಣಳು. ಸುಮಾರಾಗಿ ವಿರೂಪಾಕ್ಷ ದೇವಾಲಯದ ನಿರ್ಮಾಣ ಸಮಯದಲ್ಲಿಯೇ ಇದೂ ಕಟ್ಟಲ್ಪಟ್ಟಿತು. ಎರಡು ದೇವಾಲಯಗಳಲ್ಲಿಯೂ ಪರಸ್ಪರ ಹೋಲಿಕೆಗಳಿವೆ. ಆದರೆ ವಿರೂಪಾಕ್ಷ ದೇವಾಲಯದಷ್ಟು ದೊಡ್ಡದಾಗಿಲ್ಲ. ಇಲ್ಲಿಯೂ ದೇವಾಲಯದ ವಿವಿಧ ಭಾಗಗಳು ನಿಶ್ಚಿತ ಕ್ರಮದಲ್ಲಿ ಕಂಡುಬರುತ್ತದೆ. ಶಿಲ್ಪಗಳಿಗೆ ವಿಶೇಷ ಪ್ರಾಧಾನ್ಯವಿರುವುದೂ ನಮ್ಮ ಗಮನವನ್ನು ಸೆಳೆಯುತ್ತದೆ. ರಾಮಾಯಣ, ಮಹಾಭಾರತ, ಇತರ ಪುರಾಣಗಳ ಕಥೆಗಳು ; ಶೈವ, ವೈಷ್ಣವ ದೇವತಾ ಮೂರ್ತಿಗಳು, ಗಂಧರ್ವರು, ದಂಪತಿಗಳು ಮುಂತಾದ ಶಿಲ್ಪಗಳು ಇಲ್ಲಿಯೂ ಇವೆ. ಮಂಟಪದ ಬಲಗಡೆಗೆ ಇರುವ ಶಿಲ್ಪಗಳಲ್ಲಿ



ಮಲ್ಲಿಕಾರ್ಜುನ ದೇವಾಲಯ, ಪಟ್ಟದಕಲ್ಲು

ಕೃಷ್ಣನಿಗೆ ಸಂಬಂಧಿಸಿದ ಶಿಲ್ಪಗಳಿವೆ. ಕೃಷ್ಣನ ಜನನ, ಗೋವರ್ಧನಗಿರಿಯನ್ನು ಎತ್ತಿಕೊಂಡು ಹೋಗುತ್ತಿರುವುದು, ಗೋಪಿಕಾ ಸ್ತ್ರೀಯರೊಡನೆ ಸರಸ, ಪೂತಿನಿಯ ಸಂಹಾರ ಮುಂತಾದ ಕಥೆಗಳು ಗಮನಾರ್ಹವಾದವು.

ಪಂಚತಂತ್ರ

ಮಂಟಪದ ಎಡಗಡೆಯಲ್ಲಿರುವ ಪಂಚತಂತ್ರದ ಕಥೆಗಳನ್ನು ನೋಡಲೇಬೇಕು. ಶಿಂಶುಮಾರ ಕಥೆ ಅಥವಾ ಕಪಿ ಮೊಸಳೆ ಕಥೆ ಎಂದು ಖ್ಯಾತವಾಗಿರುವ ಕಥೆಯು ಹೃದಯಂಗಮವಾಗಿ ಶಿಲ್ಪಿತವಾಗಿದೆ. ಒಂದು ಮೊಸಳೆಯ ಮೇಲೆ ಕಪಿಯೊಂದು ಕೂತಿದೆ. ತನ್ನ ಗಂಡನು ಕಪಿಯೊಡನೆ ಸಮಯ ಕಳೆಯುವುದನ್ನು ಸಹಿಸದ ಹೆಣ್ಣು ಮೊಸಳೆಯು ಕಪಿಯನ್ನು ಕೊಲ್ಲಲು ಯೋಚಿಸಿ ಉಪಾಯ ಹೂಡುತ್ತದೆ. ತನಗೆ ಹೊಟ್ಟೆನೋವೆಂದೂ ಕಪಿಯ ಹೃದಯವನ್ನು ತಿಂದರೆ ಬದುಕುವುದಾಗಿಯೂ ಗಂಡು ಮೊಸಳೆಗೆ ತಿಳಿಸುತ್ತದೆ. ಗಂಡು ಮೊಸಳೆಯು ಕಪಿಯನ್ನು ಉಪಾಯದಿಂದ ತನ್ನ ಹೆಂಡತಿಯ

ಕಡೆಗೆ ಕರೆದುಕೊಂಡು ಹೋಗುತ್ತಾ, ನದಿ ಮಧ್ಯೆ ಬಂದಾಗ ಈ ವಿಷಯವನ್ನು ತಿಳಿಸುತ್ತದೆ. ಕೂಡಲೇ ಕಪಿಯು ತನ್ನ ಹೃದಯವು ಮರದ ಮೇಲೆ ತನ್ನ ಹೆಂಡತಿಯ ಹತ್ತಿರ ಇದೆಯೆಂದೂ, ಅದನ್ನು ತರಲು ನದಿಯ ಆ ದಡಕ್ಕೆ ಹೋಗಬೇಕೆಂದೂ ಹೇಳಿ ಪಾರಾಗುತ್ತದೆ. ಮತ್ತೊಂದು ಕಥೆಯಲ್ಲಿ ಕಪಿಯೊಂದು ಬೆಣೆಯನ್ನು ಕಿತ್ತು ಸಂಕಟಕ್ಕೆ ಸಿಕ್ಕಿಕೊಂಡ ಪಂಚತಂತ್ರದ ಕಥೆಯೂ ಇದೆ. ಮತ್ತೊಂದರಲ್ಲಿ ಗಜೇಂದ್ರ ಮೋಕ್ಷದ ಕಥೆಯಿದೆ. ಹೀಗೆ ಮಲ್ಲಿಕಾರ್ಜುನ ದೇವಾಲಯದಲ್ಲಿ ನೂರಾರು ಕಥೆಗಳು ಚಿತ್ರಿತವಾಗಿವೆ.

ಪಟ್ಟದಕಲ್ಲಿನಲ್ಲಿ ಗಮನಿಸಬೇಕಾದ ಮತ್ತೊಂದು ಗುಡಿಯೆಂದರೆ ಜೈನ ದೇವಾಲಯ. ಇದು ದ್ರಾವಿಡ ಶೈಲಿಯ ದೇವಾಲಯ.

ಅವನತಿ

ಈ ರೀತಿಯ ದೇವಾಲಯಗಳ ನಿರ್ಮಾಣಕಾರ್ಯ ಬಾದಾಮಿಯ ಚಾಲುಕ್ಯರ ಅವನತಿಯೊಂದಿಗೆ ನಿಂತುಹೋಯಿತು. ಮತ್ತೆ ಸುಮಾರು ಇನ್ನೂರು ವರ್ಷಗಳ ಕಾಲದಲ್ಲಿ ಚಾಲುಕ್ಯರು ಎಲ್ಲಿಯೋ ಸಾಮಂತರಾಗಿ ಆಳುತ್ತಿದ್ದು ವಾಸ್ತುಶಿಲ್ಪ ಕಲೆಗೆ ಪ್ರಾಮುಖ್ಯತೆಯನ್ನು ಕೊಡಲು ಸಮರ್ಥರಾಗಿರಲಿಲ್ಲ. ಹೀಗಾಗಿ ಬಾದಾಮಿ ಚಾಲುಕ್ಯ ವಾಸ್ತುಶಿಲ್ಪ ಕಲೆ ಅವನತಿಯನ್ನು ಹೊಂದಿತು. ಆದರೆ ಇಮ್ಮಡಿ ತೈಲಪನು ಹತ್ತನೆಯ ಶತಮಾನದ ಕೊನೆಯಲ್ಲಿ ಚಾಲುಕ್ಯರ ಪ್ರಾಬಲ್ಯವನ್ನು ಮತ್ತೆ ಅಭಿವೃದ್ಧಿಗೆ ತಂದನು. ಈ ಕಾಲದಲ್ಲಿ ಬೆಳೆದ ವಾಸ್ತುಶಿಲ್ಪ ಕಲೆಯನ್ನು ಕಲ್ಯಾಣದ ಚಾಲುಕ್ಯರ ವಾಸ್ತುಶಿಲ್ಪವೆಂದು ಕರೆಯುವುದು ವಾಡಿಕೆಯಾಗಿದೆ. ಇನ್ನು ಅದನ್ನು ಗಮನಿಸೋಣ.

ಕಲ್ಯಾಣದ ಚಾಲುಕ್ಯರ ವಾಸ್ತುಶಿಲ್ಪ

ಕಲ್ಯಾಣದ ಚಾಲುಕ್ಯರ ವಾಸ್ತುಶಿಲ್ಪವು ಮೂಲತಃ ಬಾದಾಮಿ ಚಾಲುಕ್ಯರ ವಾಸ್ತುಶಿಲ್ಪ ಸಂಪ್ರದಾಯದಿಂದಲೇ ಆರಂಭವಾದರೂ ಕೂಡ

ಕೊನೆಗೆ ತನ್ನದೇ ಆದ ಅಂಶಗಳಿಂದ ಒಂದು ಹೊಸ ರೂಪವನ್ನೇ ಪಡೆಯಿತು. ದ್ರಾವಿಡ ಶೈಲಿಯ ರಚನೆಗಳಿಗೆ ಅವಕಾಶ ಸಿಗಲಿಲ್ಲವಾಗಿ ಈ ಶೈಲಿಯು ವಿಶೇಷವಾಗಿ ವೇಸರ ಅಥವಾ ಚಾಲುಕ್ಯ ಶೈಲಿಯ ಶಿಖರಗಳನ್ನು ಬೆಳೆಸಿಕೊಂಡು ಬಂದಿತು. ಕಗ್ಗಲ್ಲು ಬಳಕೆಯಲ್ಲಿ ಮುಂದುವರಿದರೂ ಕೂಡ, ನುಣುಪಾದ, ಮೆದುವಾದ, ಸುಂದರ ಶಿಲ್ಪಗಳನ್ನು ಸುಲಭವಾಗಿ ತಯಾರು ಮಾಡಲು ಅನುಕೂಲವಾಗುವ ಕರಿಯಕಲ್ಲಿನ (ಬಳಪದಕಲ್ಲು ಬಳಕೆಯು ಆರಂಭವಾಯಿತು. ಮುಂದೆ ಈ ಕಲ್ಲಿನಲ್ಲಿಯೇ ತಮ್ಮ ಎಲ್ಲ ದೇವಾಲಯಗಳನ್ನೂ ಹೊಯ್ಸಳರು ನಿರ್ಮಿಸಿದರೆಂಬುದನ್ನು ಇಲ್ಲಿ ನೆನೆಯಬಹುದು. ಕಲ್ಲಿನಲ್ಲಿ ಗುಹೆಗಳನ್ನು ಕೊರೆಯುವ ಸಂಪ್ರದಾಯವನ್ನೂ ಕಲ್ಯಾಣದ ಚಾಲುಕ್ಯರು ಬೆಳೆಸಿಕೊಂಡು ಬರಲಿಲ್ಲ. ಆದುದರಿಂದ ಅವರ ಕಾಲದಲ್ಲಿ ಗುಹಾ ದೇವಾಲಯಗಳು ನಿರ್ಮಾಣವಾಗಲೇ ಇಲ್ಲ. ದೇವಾಲಯಗಳಲ್ಲಿ ಶಿಲ್ಪ ಮತ್ತು ಅಲಂಕಾರಗಳಿಗೆ ವಿಶೇಷ ಮಹತ್ವವನ್ನು ಕೊಡುವ ಪದ್ಧತಿಯು ಬೆಳೆದು ಬಂದುದೂ ಈ ಕಾಲದಲ್ಲಿ. ಮುಂದೆ ಈ ಪ್ರವೃತ್ತಿಯು ಹೆಚ್ಚಾಗಿ ಹೊಯ್ಸಳ ಶಿಲ್ಪಶೈಲಿಗೆ ನಾಂದಿಯಾಯಿತು. ಆಗಲೇ ಗಮನಿಸಿರುವಂತೆ ಇವರು ಕರಿಯ ಕಲ್ಲಿನ ಕಂಬಗಳನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಲಾರಂಭಿಸಿದರು. ಕಂಬಗಳನ್ನು ಚರಕಿಯಂತ್ರ (ಲೇತ್)ದ ಮೇಲೆ ತಿರುಗಿಸುವುದರಿಂದ ಅವುಗಳನ್ನು ಗುಂಡಗೂ, ಮುಖ ಕಾಣುವಂತೆ ಹೊಳೆಯುವಂತೆಯೂ ಮಾಡುವ ತಂತ್ರವನ್ನು ಕಂಡುಹಿಡಿದರು.

ಮುಖ್ಯ ಲಕ್ಷಣಗಳು

ಮೊದಲಿನ ಕಾಲದಲ್ಲಿದ್ದಂತೆ ವಾಸ್ತುವಿನ್ಯಾಸದಲ್ಲಿ ಸಂಶಯಕ್ಕೆ ಎಡೆ ಉಳಿಲಿಲ್ಲ. ನಕ್ಷತ್ರಾಕಾರದ ತಲವಿನ್ಯಾಸವುಳ್ಳ ಒಂದೆರಡು ದೇಗುಲಗಳನ್ನು ಬಿಟ್ಟರೆ, ಈ ಕಾಲದ ದೇವಾಲಯಗಳೆಲ್ಲವೂ ಆಯತಾಸ್ರಗಳು. ಗರ್ಭಗುಡಿ, ಅಂತರಾಳ, ತೆರೆದ ಮಂಟಪಗಳು ಈ ಕಾಲದ ದೇವಾಲಯದಲ್ಲಿ ಕಾಣಬರುವ ಮುಖ್ಯ ಅಂಗಗಳು. ದೇವಾಲಯದ ಗೋಡೆಯಲ್ಲಿ ಜಾಲಂಧ್ರಗಳು ವಿಶೇಷವಾಗಿಯೂ ಕಲಾತ್ಮಕವಾಗಿಯೂ ಇರುತ್ತವೆ. ಇವು ಸಾಕಷ್ಟು ಗಾಳಿ,

ಬೆಳಕು ಗರ್ಭಗುಡಿಗೆ ಬರುವಂತೆ ನೋಡಿಕೊಳ್ಳುತ್ತದೆ. ದ್ವಾರ ಬಂಧಗಳು ಅಲಂಕಾರಿಕವಾಗಿ ಮಾರ್ಪಡುವುದೂ ಇದೇ ಕಾಲದಲ್ಲಿ. ಸೂಕ್ಷ್ಮ ಕೆತ್ತನೆಯ ಕೆಲಸಗಳಿಂದ ಕೂಡಿದ ಈ ಬಾಗಿಲುವಾಡಗಳೂ ನೋಡಲು ಬಲು ಸುಂದರ. ಒಟ್ಟಿನಲ್ಲಿ ಹೇಳುವುದಾದರೆ ಹೊಯ್ಸಳ ಶಿಲ್ಪಶೈಲಿಗೆ ನಾಂದಿಯಾದುದೇ ಕಲ್ಯಾಣದ ಚಾಲುಕ್ಯರ ಕಾಲದಲ್ಲಿ.

ಆರಂಭ ಕಾಲ

ಕಲ್ಯಾಣದ ಚಾಲುಕ್ಯ ವಾಸ್ತುಶೈಲಿಯು ಪ್ರಾರಂಭವಾದುದು ಉತ್ತರ ಕರ್ನಾಟಕದಲ್ಲಿ. ಸುಮಾರು ಹನ್ನೊಂದನೆಯ ಶತಮಾನದಿಂದ ಪ್ರಾರಂಭವಾದ ಈ ಶೈಲಿಯು ಕಾಲಕ್ರಮದಲ್ಲಿ ದಕ್ಷಿಣ ಕರ್ನಾಟಕದ ಶಿವಮೊಗ್ಗ ಜಿಲ್ಲೆಯವರೆಗೂ ಹಬ್ಬಿ, ನೂರಾರು ದೇವಾಲಯಗಳ ಸೃಷ್ಟಿಗೆ ಕಾರಣವಾಯಿತು. ಇದೇ ಮುಂದುವರಿದು, ಕೆಲವು ಸಣ್ಣ ಪುಟ್ಟ ಬದಲಾವಣೆಗಳೊಂದಿಗೆ, ಹೊಯ್ಸಳ ವಾಸ್ತುಶೈಲಿಯಾಗಿ ಮಾರ್ಪಟ್ಟು, ಕರ್ನಾಟಕದ ಖ್ಯಾತಿಯನ್ನು ನೂರ್ಮಡಿಯಾಗಿಸಿತು.

ಕುಕ್ಕನೂರು

ವಾಸ್ತುಶಿಲ್ಪದ ವಿಕಾಸ ಅಥವಾ ಬೆಳವಣಿಗೆಯ ದೃಷ್ಟಿಯಿಂದ ಕಲ್ಯಾಣದ ಚಾಲುಕ್ಯ ವಾಸ್ತುಶಿಲ್ಪಶೈಲಿಯಲ್ಲಿ ನಾಲ್ಕು ವಿವಿಧ ಹಂತಗಳನ್ನು ಗುರುತಿಸಬಹುದು. ಮೊದಲನೆಯ ಅಥವಾ ಪ್ರಾರಂಭಿಕ ಹಂತದಲ್ಲಿ ಈ ಶೈಲಿಯು ಇನ್ನೂ ಶೈಶವಾವಸ್ಥೆಯಲ್ಲಿರುವುದು ಕಂಡುಬರುತ್ತದೆ. ಕುಕ್ಕನೂರಿನ ನವಲಿಂಗ ಮತ್ತು ಕಲ್ಲೇಶ್ವರ ದೇವಾಲಯಗಳು ಈ ಮೊದಲನೆಯ ಹಂತಕ್ಕೆ ಉತ್ತಮ ಉದಾಹರಣೆ. ಗದಗಿಗೆ ಸಮೀಪದಲ್ಲಿರುವ ಕುಕ್ಕನೂರಿನ ಈ ಎರಡು ದೇವಾಲಯಗಳಲ್ಲಿಯೂ ಹಿಂದಿನ ವಾಸ್ತುಶೈಲಿಯ ಮಾದರಿಗಳನ್ನೇ ಬಳಸಿದ್ದಾರೆಯೇ ಹೊರತು ಕಲಿಯು ಕಲ್ಪನೆಯಲ್ಲ. ನವಲಿಂಗ

ದೇವಾಲಯವನ್ನು ನೋಡಿದ ತಕ್ಷಣ ಸಹಜವಾಗಿ ಪಟ್ಟದಕಲ್ಲಿನ ದೇವಾಲಯಗಳ ನೆನಪು ಬರುತ್ತದೆ. ಆದರೆ ಶಿಖರವನ್ನು, ಅದರಲ್ಲಿಯೂ ಅದರ ಸ್ತೂಪಿ (ತುದಿಯ ಭಾಗ ಅಥವಾ ಕಲಶ)ಯನ್ನು ಗಮನಿಸಿದಾಗ, ನವಲಿಂಗ ದೇವಾಲಯವು ವಾಸ್ತುಶೈಲಿಯ ವಿಕಾಸದ ಮುಂದಿನ ಹಂತವೆಂದು ಗೊತ್ತಾಗುತ್ತದೆ. ಕಲ್ಲೇಶ್ವರ ದೇವಾಲಯದಲ್ಲಿ ಗರ್ಭಗುಡಿ, ಅಂತರಾಳ, ನಾಲ್ಕು ಕಂಬಗಳ ನವರಂಗ, ಮಂಟಪ ಮತ್ತು ನಂದಿಮಂಟಪಗಳು ಒಂದೇ ಸಾಲಿನಲ್ಲಿದ್ದು ಉತ್ತರ ಚಾಲುಕ್ಯ ಶೈಲಿಯ ಸುಂದರ ಪ್ರಾರಂಭವನ್ನು ಸೂಚಿಸುತ್ತವೆ. ಅಲಂಕಾರಕ್ಕೆ ಇನ್ನೂ ಪ್ರಾಧ್ಯಾನ್ಯತೆ ಬಂದಿರಲಿಲ್ಲವೆಂಬುದು ಬಲು ಸರಳವಾದ ಗೋಡೆಗಳಿಂದ ತಿಳಿಯುಬರುತ್ತದೆ. ಅಲ್ಲಲ್ಲಿ ಅರೆಗಂಬಗಳು, ಇರುವುದರಿಂದ ಸರಳತೆಯು ಅಷ್ಟಾಗಿ ಬೇಜಾರೆನಿಸುವುದಿಲ್ಲ.

ಲಕ್ಕುಂಡಿ


ಎರಡನೆಯ ಹಂತದಲ್ಲಿ ಕರಿಕಲ್ಲಿನ ಬಳಕೆಯು ಕಾಣಬರುತ್ತದೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಲಕ್ಕುಂಡಿ (ಲೊಕ್ಕಿಗುಂಡಿ)ಯ ಜೈನ ದೇವಾಲಯ. ಇಲ್ಲಿ ಮೆದುವಾದ ಕರಿಕಲ್ಲನ್ನು ಬಳಸಿರುವುದರಿಂದ, ಅದರ ಜೊತೆಯಲ್ಲಿಯೇ ಅಲಂಕರಣ ಕಾರ್ಯವೂ ಹೆಚ್ಚುತ್ತದೆ. ದೇವಾಲಯದ ಹೊರಗೋಡೆಗಳಲ್ಲಿ ಅಲ್ಲಲ್ಲಿ ಅರೆಗಂಬಗಳು (ಗೋಡೆಯಲ್ಲಿ ಅರ್ಧ ಇರುವ ಕಂಬಗಳು), ಅವುಗಳ ಮೇಲೆ ಕಾಣಬರುವ ಶಿಖರಾಕೃತಿಗಳು, ಎರಡು ಅರೆಗಂಬಗಳನ್ನು ಸೇರಿಸುವಂತೆ ಕಾಣುವ ಲತೆಗಳ ಅಲಂಕಾರ, ಸುರಳಿಯಾಕಾರದ ಲತೆಗಳು—ಇವುಗಳಿಂದ ಸರಳತೆಯು ಅಷ್ಟಾಗಿ ತೋರುವುದಿಲ್ಲ. ಗೋಡೆಯೂ ತುಂಬಿದಂತೆ ಭಾಸವಾಗುತ್ತದೆ. ಇದು ಸುಮಾರಾಗಿ ದೊಡ್ಡ ಕಟ್ಟಡವೂ ಹೌದು. ೯೩ ಅಡಿ ಉದ್ದ, ೩೫ ಅಡಿ ಅಗಲ ಮತ್ತು ೪೨ ಅಡಿ ಎತ್ತರದ ಶಿಖರವನ್ನುಳ್ಳ ಈ ದೇವಾಲಯದ ಶಿಖರದಲ್ಲಿ—ಇತರ ಜೈನ ದೇವಾಲಯಗಳಂತೆ—ಎರಡನೆಯ ಅಂತಸ್ತನ್ನು ಕಾಣುತ್ತೇವೆ. ಶಿಲ್ಪಿಯ ಕೆಲಸ ನಯ, ನಾಜೂಕಿನಿಂದ ಕೂಡಿದ್ದು, ಶಿಖರದಲ್ಲಿ ಬಾಗುವಿಕೆ ಕಾಣುತ್ತದೆ. ಬಹುಶಃ ಈ ದೇವಾಲಯವು ಹನ್ನೊಂದನೆಯ ಶತಮಾನದ ಉತ್ತರಾರ್ಧದಲ್ಲಿ ನಿರ್ಮಾಣವಾಗಿರಬೇಕೆಂದು ಊಹಿಸಬಹುದು.

ಚೌಡದಾನಪುರ

ಉತ್ತರ ಚಾಲುಕ್ಯ ಶೈಲಿಯ ಮೂರನೆಯ ಹಂತವನ್ನು ಚೌಡದಾನಪುರದ ಮುಕ್ತೇಶ್ವರ, ಹಾವೇರಿಯ ಸಿದ್ಧೇಶ್ವರ, ಹರಳಹಳ್ಳಿಯ ಸೋಮೇಶ್ವರ ಮುಂತಾದ ದೇಗುಲಗಳಲ್ಲಿ ಕಾಣುತ್ತೇವೆ. ಇಲ್ಲಿ ಮುಂದೆ ಚಾಚಿದ ಬಿರಿಕಪೋತಗಳನ್ನು ದೇವಾಲಯದ ಸೌಂದರ್ಯವನ್ನು ಹೆಚ್ಚಿಸುವ ಸಲುವಾಗಿ ಬಳಸಿರುವುದು ನಮ್ಮ ಗಮನ ಸೆಳೆಯುತ್ತದೆ. ಇದು ಇಷ್ಟಕ್ಕೇ ನಿಲ್ಲದೆ ಎರಡು ಬಾಗುಳ್ಳದ್ದಾಗಿ ಶಿಲ್ಪಗಳಿಗೆ ಛತ್ರಿಯನ್ನು ಹಿಡಿದಂತೆ ಕಾಣುತ್ತದೆ. ಮುಂದೆ ಹೋಗುತ್ತ ಇದರಲ್ಲಿ ಇನ್ನೂ ಅಲಂಕಾರಗಳು ಹೆಚ್ಚಾಗಿ ಮಣಿ ತೋರಣ ಅಥವಾ ಮಣಿಸರದಂತೆ ಮುಂದುವರಿದು ಬಹು ರಮ್ಯವಾಗಿ ಕಾಣ ಬರುತ್ತದೆ.

ಇಟ್ಟಗಿ

ನಾಲ್ಕನೆಯ ಮತ್ತು ಕೊನೆಯ ಘಟ್ಟದಲ್ಲಿ ಕಲ್ಯಾಣದ ಚಾಲುಕ್ಯ ವಾಸ್ತುಶೈಲಿಯು ಪೂರ್ಣವಾಗಿ ವಿಕಾಸಗೊಂಡಿತು. ಅಂದರೆ ತನ್ನ ಸ್ವಂತಿಕೆಯನ್ನು ಪಡೆದು ಚಾಲುಕ್ಯಯುಗದ ಮಹಾವಾಸ್ತುಶಿಲ್ಪ ಕೃತಿಗಳನ್ನು ಕರ್ನಾಟಕಕ್ಕೆ ಬಳುವಳಿಯಾಗಿ ಕೊಟ್ಟಿತು. ಇವು ಕರ್ನಾಟಕ ವಾಸ್ತುಶಿಲ್ಪ ಇತಿಹಾಸದಲ್ಲಿ ಮಾತ್ರವಲ್ಲ, ಭಾರತೀಯ ವಾಸ್ತುಶಿಲ್ಪ ಇತಿಹಾಸದಲ್ಲಿಯೂ ಗಣ್ಯಸ್ಥಾನವನ್ನು ಪಡೆದಿವೆ. ಸುಮಾರಾಗಿ ಹನ್ನೆರಡನೆಯ ಶತಮಾನದ ಪ್ರಾರಂಭದಲ್ಲಿ ವಿಕಾಸಗೊಂಡ ಈ ಕೊನೆಯ ಹಂತವು ಬಹಳ ಬೇಗನೆ ಅವನತಿ ಹೊಂದಿದರೂ ಹೊಯ್ಸಳ, ಸೇವುಣ, ಕಾಕತೀಯ ಮುಂತಾದ ಶೈಲಿಗಳಿಗೆ ಎಡೆಮಾಡಿಕೊಟ್ಟು ಅಮರವಾಯಿತು. ಈ ಕೊನೆಯ ಹಂತದ ಶೈಲಿಗೆ ನಾಲ್ಕಾರು ಉದಾಹರಣೆಗಳನ್ನು ಕೊಡಬಹುದು. ಲಕ್ಕುಂಡಿಯ ಕಾಶಿ ವಿಶ್ವೇಶ್ವರ, ಕುರುವತ್ತಿಯ ಮಲ್ಲಿಕಾರ್ಜುನ, ಇಟ್ಟಗಿಯ ಮಹಾದೇವ, ಬಳ್ಳಿಗಾವೆಯ ತ್ರಿಪುರಾಂತಕ ಮುಂತಾದವು ಈ ನಾಲ್ಕನೆಯ ಹಂತಕ್ಕೆ ಶ್ರೇಷ್ಠ ನಿದರ್ಶನಗಳು. ಕಾಶಿ ವಿಶ್ವೇಶ್ವರ ದೇವಾಲಯದಲ್ಲಿ ಎರಡು ಗರ್ಭಗೃಹಗಳಿದ್ದು ದ್ವಿಕೂಟಾಚಲವೆನಿಸಿದೆ. ಇಲ್ಲಿಯ ಶಿಖರದಲ್ಲಿ ಅಲಂಕಾರವು ನಾನಾ



ಮಹಾದೇವ ದೇವಾಲಯ, ಇಟ್ಟಗಿ



ಮಹಾದೇವ ದೇವಾಲಯದ ಕಂಬಗಳ ಸಾಲ

ಗೊಂಡಿದೆ. ಬಾಗಿಲುವಾಡಗಳಂತೂ ಹೊಯ್ಸಳ ಶಿಲ್ಪವನ್ನು ನಮಗೆ ಜ್ಞಾಪಕ ಮಾಡಿಕೊಡುತ್ತವೆ. ಅವರಲ್ಲಿಯೂ ದಕ್ಷಿಣದ ದ್ವಾರಬಂಧವಂತೂ ದೇವತೆಗಳು, ಮಾನವರು, ಲತೆಗಳು ತೋರಣಗಳು ಮತ್ತು ಇತರ ಅಲಂಕಾರಗಳಿಂದ ಶೋಭಿಸುತ್ತದೆ. ಇದರ ಮೇಲೆ ಮಧ್ಯದಲ್ಲಿರುವ ಗಜಲಕ್ಷ್ಮಿಯ ಶಿಲ್ಪವಂತೂ ನಮ್ಮ ಮನಸ್ಸನ್ನು ಸೆರೆಹಿಡಿಯುತ್ತದೆ.

ಗದಗಿಗೆ ಸಮೀಪದಲ್ಲಿಯೇ ಇರುವ ಇಟ್ಟಗಿಯ ಮಹಾದೇವ ದೇವಾಲಯವು ಚಾಲುಕ್ಯ ಶಿಲ್ಪದ ಸೂಕ್ಷ್ಮ ವೈಖರಿಗೆ ಹೆಸರುವಾಸಿಯಾಗಿದೆ. ಎಲ್ಲಿಂದ ನೋಡಿದರೂ ಬರೀ ಶಿಲ್ಪಗಳೇ ಕಾಣಬರುತ್ತವೆ. ೧೧೧೨ರಲ್ಲಿ ಆರನೆಯ ವಿಕ್ರಮಾದಿತ್ಯನ ದಂಡನಾಯಕನಾದ ಮಹಾದೇವನು ಈ ದೇಗುಲವನ್ನು ನಿರ್ಮಿಸಿದನು. ಇಲ್ಲಿರುವ ಶಾಸನವೊಂದು ಈ ದೇಗುಲವನ್ನು 'ದೇವಾಲಯ ಚಕ್ರವರ್ತಿ' ಎಂದು ಬಣ್ಣಿಸಿದೆ. ಇದನ್ನು ಒಮ್ಮೆ ನೋಡಿದರೆ ಶಾಸನದ ಮಾತು ಸತ್ಯವೆಂಬುದು ಮನವರಿಕೆಯಾಗುತ್ತದೆ. ಗರ್ಭಗುಡಿ, ಅಂತರಾಳ, ಎರಡು ಪಕ್ಕಗಳಲ್ಲಿ ಬಾಗಿಲುಗಳಿರುವ ನವರಂಗ, ತೆರೆದ ಮಂಟಪಗಳಿರುವ ಈ ದೇವಾಲಯದಲ್ಲಿ ಪ್ರತಿಯೊಂದು ಅಂಗವೂ ಸಮತೋಲನ ಪ್ರಮಾಣದಲ್ಲಿದೆ. ಕನ್ನಡಿಯಂತೆ ಹೊಳೆಯುವ ನುಣುಪಾದ ಕಂಬಗಳು, ಕುಸುರಿ ಕೆಲಸದ ಬಾಗಿಲುವಾಡಗಳು, ಭವ್ಯವಾದ ಶಿಖರಗಳು ಈ ದೇವಾಲಯದ ಇತರ ವಿಶಿಷ್ಟ ಅಂಶಗಳು. ಆದರೆ ಇಂಥ ದೇವಾಲಯವು ಸ್ವಲ್ಪ ಹಾಳಾಗಿರುವುದು ನಮ್ಮ ದುರ್ದೈವ.

ಕುರುವತ್ತಿ

ಕುರುವತ್ತಿಯ ಮಲ್ಲಿಕಾರ್ಜುನ ದೇವಾಲಯದಲ್ಲಿ ಹೊರಭಿತ್ತಿ, ಕಂಬಗಳೂ, ಅವುಗಳ ಮೇಲೆ ಶಿಲಾಬಾಲಿಕೆಯರ ಸುಂದರ ಶಿಲ್ಪಗಳೂ ಇವೆ. ಭಾರತೀಯ ಶಿಲ್ಪಗಳಿಗೆ ಶಿಲಾಬಾಲಿಕೆಯರ ಪರಿಚಯ ಇದ್ದರೂ, ಹೊಯ್ಸಳ ಶಿಲ್ಪಿಗಳಿಗೆ ಮದನಿಕೆ ಅಥವಾ ಶಿಲಾಬಾಲಿಕೆಯರ ಮೋಹಕರೂಪವನ್ನು ಒದಗಿಸಿದ ಕೀರ್ತಿ ಸಮೀಪವರ್ತಿಗಳೇ ಆದ ಕುರುವತ್ತಿಯ ಮಲ್ಲಿಕಾರ್ಜುನ ದೇಗುಲದ ಶಿಲ್ಪಿಗಳಿಗೇ ಸೇರಬೇಕೆಂದರೆ ತಪ್ಪಾಗಲಾರದು.



ಮಲ್ಲಿಕಾರ್ಜುನ ದೇವಾಲಯ, ಕುರುವತ್ತಿ

ಗದಗ

ಕನ್ನಡಿಗರೆಲ್ಲರಿಗೂ ಸುಪರಿಚಿತವಾದ ಗದಗಿನಲ್ಲಿರುವ ದೇವಾಲಯಗಳನ್ನು ಮರೆಯುವಂತಿಲ್ಲ. ಕನ್ನಡದ ಕೀರ್ತಿಯನ್ನು ಮೆರೆದ ಕುಮಾರವ್ಯಾಸನ ವೀರನಾರಾಯಣ ದೇವಾಲಯವಿರುವುದೂ ಗದಗಿನಲ್ಲಿ. ಇಲ್ಲಿ ಮೂರು ಚಾಲುಕ್ಯ ದೇವಾಲಯಗಳಿವೆ. ತ್ರಿಕೂಟೇಶ್ವರ, ಸರಸ್ವತಿ ಮತ್ತು ಸೋಮೇಶ್ವರರಿಗೆ ಕಟ್ಟಲಾದ ಈ ದೇವಾಲಯಗಳು ಚಾಲುಕ್ಯ ಶೈಲಿಯ ಕೊನೆಯ ಹಂತಕ್ಕೆ ಸೇರಿದವು. ಇವುಗಳಲ್ಲಿ ಸೋಮೇಶ್ವರ ದೇವಾಲಯವು ಸ್ವಲ್ಪ ಭಿನ್ನ ರೀತಿಯಲ್ಲಿರುವುದನ್ನು ಗಮನಿಸಬೇಕು. ಈ ದೇವಾಲಯದ ಹೊರಗೋಡೆಗಳಲ್ಲಿರುವ ಅರೆಗಂಬಗಳು, ಅವುಗಳ ಮಧ್ಯದಲ್ಲಿರುವ ಗೂಡುಗಳು, ಅವುಗಳೊಳಗಿರುವ ಸುಂದರ ಶಿಲ್ಪಗಳು ಇದು ಹೊಯ್ಸಳ ಶೈಲಿಗೆ ಸೇರಿದ ದೇವಾಲಯವೋ ಎಂಬ ಭ್ರಾಂತಿಯನ್ನು ಉಂಟುಮಾಡುತ್ತವೆ.

ಡಂಬಳ

ಮತ್ತೊಂದು ಗಮನಾರ್ಹ ದೇವಾಲಯವೆಂದರೆ ಡಂಬಳದ ದೊಡ್ಡ ಬಸಪ್ಪ ದೇವಾಲಯ. ಇದು ಚಾಲುಕ್ಯ ವಾಸ್ತುರೀತಿಗೆ ಅಪವಾದವೆನಿಸಿದೆ. ಏಕೆಂದರೆ ಇದರ ತಲವಿನ್ಯಾಸ ನಕ್ಷತ್ರಾಕಾರವಾಗಿದ್ದು ಹೊಯ್ಸಳ ದೇವಾಲಯಗಳ ನಕ್ಷತ್ರಾಕಾರವನ್ನೇ ಹೋಲುತ್ತದೆ. ಅಂದರೆ ಚಾಲುಕ್ಯ ದೇವಾಲಯದ ತಂತ್ರಗಳು, ಹೊಯ್ಸಳ ವಾಸ್ತುರೀತಿಯ ಕಡೆಗೆ ಪ್ರವಹಿಸುತ್ತಿದ್ದವು ಎಂಬುದಕ್ಕೆ ಗದಗಿನ ಸೋಮೇಶ್ವರ ಮತ್ತು ಡಂಬಳದ ದೊಡ್ಡ ಬಸಪ್ಪ ದೇವಾಲಯಗಳು ಉದಾಹರಣೆಗಳು.

ನಾವು ಮೇಲೆ ಕೇವಲ ನಾಲ್ಕಾರು ಚಾಲುಕ್ಯ ದೇವಾಲಯಗಳನ್ನು ಮಾತ್ರ ಗಮನಿಸಿದ್ದೇವೆ. ಈ ರೀತಿಯ ಸುಂದರ ದೇವಾಲಯಗಳು ಹಾವೇರಿ, ಹಾನಗಲ್, ಬಂಕಾಪುರ, ಹರಿಹರ, ಗಳಗನಾಥ, ರಟ್ಟಿಹಳ್ಳಿ, ತಿಲವಳ್ಳಿ, ಉಣಕಲ್, ನಿಲಗುಂದ, ಹೂವಿನಹಡಗಲಿ, ದೇಗಾಂವೆ, ಬಳ್ಳಿಗಾವೆ, ಇಟಗಿ, ನಿಂಬರ್ಗಿ ಮುಂತಾದ ಕಡೆಗಳಲ್ಲಿವೆ. ಅವೆಲ್ಲವೂ ಮೇಲೆ ಹೇಳಿದ

ಪಾತ್ರಗಳಲ್ಲಿ ಒಂದಕ್ಕೆ ಸೇರುತ್ತವೆ. ಈ ರೀತಿ ಕಲ್ಯಾಣದ ಚಾಲುಕ್ಯ ಅರಸರು, ರಾಣಿಯರು, ಮಂತ್ರಿಗಳು, ಅಧಿಕಾರಿಗಳು, ಶ್ರೀಮಂತರು ತಮ್ಮ ಕಾರ್ಯಭಾರಗಳ ನಡುವೆ ದೇವಾಲಯಗಳನ್ನೂ ನಿರ್ಮಿಸಿ ತಮ್ಮ ಕಲಾಪಕ್ಷಪಾತವನ್ನು ತೋರಿಸಿರುವರಲ್ಲದೆ, ಭಾರತೀಯ ಸಾಂಸ್ಕೃತಿಕ ಇತಿಹಾಸದಲ್ಲಿ ಅಮರರಾಗಿದ್ದಾರೆ.

ಶಿಲ್ಪಗಳು

ಇನ್ನು ಕೆಲವು ಪ್ರಮುಖ ಶಿಲ್ಪಗಳನ್ನು ಗಮನಿಸೋಣ. ಆಗಲೇ ಹೇಳಿರುವಂತೆ ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ವಾಸ್ತು ಮತ್ತು ಶಿಲ್ಪ ಒಂದಕ್ಕೊಂದು ಸಹಾಯಕವಾಗುವಂತೆ ಇರುವುದು ಗಮನಿಸಬೇಕಾದ ಅಂಶ. ಬಾದಾಮಿ ಚಾಲುಕ್ಯರ ಕಾಲದಲ್ಲಿ ದೇವಾಲಯಗಳಲ್ಲಿ ಶಿಲ್ಪಾಲಂಕಾರ ಕಡಿಮೆ. ಹೊಯ್ಸಳರ ಕಾಲದಲ್ಲಿ ಎಲ್ಲೆಲ್ಲೂ ಶಿಲ್ಪ. ಆದರೆ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಈ ಎರಡಕ್ಕೂ ಮಧ್ಯೆ ಇರುವ ಶೈಲಿಯನ್ನು ಕಾಣುತ್ತೇವೆ. ಅಂದರೆ ಶಿಲ್ಪವು ಹಿತವಾಗಿ ಮತ್ತು ಮಿತವಾಗಿ ವಾಸ್ತುವಿನಲ್ಲಿ ಸೇರಿ ದೇವಾಲಯಕ್ಕೆ ಶೋಭೆಯನ್ನು ತರುತ್ತದೆ.

ಕಂಬಗಳು

ಉದಾಹರಣೆಗೆ ಕಂಬಗಳನ್ನು ತೆಗೆದುಕೊಳ್ಳೋಣ. ಅವು ಚರಕಿ ಯಂತ್ರದ ಮೇಲೆ ತಿರುಗಿಸಲ್ಪಟ್ಟವು ಮತ್ತು ಮುಖ ಕಾಣುವಂತೆ ಹೊಳಪುಳ್ಳ ಕರಿಯಕಲ್ಲಿನವು. ಈ ಕಂಬಗಳನ್ನು ನವರಂಗದಲ್ಲಿ ಸ್ಥಾಪಿಸಿ ದೇವಾಲಯದ ಅಲಂಕಾರವನ್ನು ಹೆಚ್ಚು ಮಾಡಿರುವುದು ಈ ಶೈಲಿಯ ಪ್ರಾಮುಖ್ಯತೆ.

ವಿಗ್ರಹಗಳು

ವಿಗ್ರಹಗಳಲ್ಲಿ ಸಾಮಾನ್ಯವಾಗಿ ದೇವಾನುದೇವತೆಗಳೇ ವಿಶೇಷ. ಬ್ರಹ್ಮ, ಸೂರ್ಯ, ಉಮಾಮಹೇಶ್ವರ, ಗಣೇಶ, ಮಹಿಷಾಸುರಮರ್ದಿನಿ ಮುಂತಾದ ವಿಗ್ರಹಗಳು ದೇವಾಲಯಗಳ ಹೊರಗೋಡೆಗಳಲ್ಲಿ ವಿಶೇಷವಾಗಿ ಕಾಣಬರುತ್ತವೆ. ಈ ವಿಗ್ರಹಗಳನ್ನು ಮಾಡುವಾಗಲೂ ಹೆಚ್ಚಾಗಿ ಅಲಂಕಾರಕ್ಕೆ ಗಮನ ಕೊಟ್ಟಿರುವುದು ಕಾಣಬರುವುದಿಲ್ಲ. ಆದರೆ ಏನು ಬೇಕೋ ಅಷ್ಟು ಮಿತ ಅಲಂಕಾರಗಳು ಇವುಗಳಲ್ಲಿ ಕಂಡುಬರುತ್ತವೆ. ಈ ದೃಷ್ಟಿಯಿಂದ ಕಲ್ಯಾಣ ಚಾಲುಕ್ಯ ಶಿಲ್ಪಗಳು ಉತ್ತಮವಾದ ಕೃತಿಗಳು ಎಂದು ಅನೇಕ ಪಾಶ್ಚಾತ್ಯ ವಿದ್ವಾಂಸರು ಭಾವಿಸುತ್ತಾರೆ.

ಸೂರ್ಯ

ಉದಾಹರಣೆಗೆ ಸೂರ್ಯನ ವಿಗ್ರಹವನ್ನು ಗಮನಿಸೋಣ. ತ್ರಿಭಂಗದಲ್ಲಿ ನಿಂತಿರುವ ಸೂರ್ಯನ ಮುಖದಲ್ಲಿ ಪ್ರಕಾಶಮಾನವಾದ ತೇಜಸ್ಸಿದೆ. ಉಷ್ಣೀಷವೆಂಬ ಕಿರೀಟವು ಅಲಂಕೃತವಾಗಿದೆ. ಹಿಂದಿನ ಪ್ರಭಾವಳಿಯಲ್ಲಿ ಇತರ ದೇವತೆಗಳು. ಅಲಂಕಾರವಿದ್ದರೂ ಮಿತಿಯನ್ನು ಮೀರಿಲ್ಲ. ಸೂರ್ಯನು ಹಿಡಿದಿರುವ ಕಮಲದ ಹೂಗಳು ಬಹು ನೈಜವಾಗಿವೆ. ಸೂರ್ಯನು ನಿಂತಿರುವ ರಥವು ಸುಂದರವಾಗಿಯೂ ಸರಳವಾಗಿಯೂ ಇದೆ. ಏಳು ಕುದುರೆಗಳು ರಥವನ್ನು ಎಳೆಯುತ್ತಿರುವಂತೆ ತೋರಿಸಿರುವ ಶಿಲ್ಪಿಯ ಜಾಣ್ಮೆ ಮೆಚ್ಚುವಂತಹುದು. ರಥದ ಗಾಲಿಗಳು ತಿರುಗುತ್ತಿವೆಯೋ ಎಂಬ ಭ್ರಾಂತಿಯೂ ಬರುವಂತಿರುವುದು ಇದರ ಹೆಚ್ಚಳ.

ಉಮಾಮಹೇಶ್ವರ

ಬೆಳಗಾವಿಯ ಉಮಾಮಹೇಶ್ವರ ಅದ್ಭುತ ಶಿಲ್ಪ. ಶಿಲ್ಪಿ ಈ ವಿಗ್ರಹದಲ್ಲಿ ಅಲಂಕಾರಕ್ಕಿಂತ ಮುಖಭಾವಕ್ಕೇ ಹೆಚ್ಚು ಗಮನ ಕೊಟ್ಟಿದ್ದಾನೆ

ಶಿಲ್ಪ. ನಿಂತಿರುವ ಈಶ್ವರ, ಅವನ ಪಕ್ಕದಲ್ಲಿ ಅವನಿಗೆ ಸಮೀಪದಲ್ಲೇ ಇರುವ ಪಾರ್ವತಿ, ಕೆಳಗಿರುವ ಗಣಪತಿ ಸುಂದರವಾಗಿ ಕೆತ್ತಲ್ಪಟ್ಟಿದ್ದಾರೆ. ಕಾಲಕ್ರಮದಲ್ಲಿ ಅಲಂಕಾರ ಹೆಚ್ಚಾದಂತೆ ಮೂರ್ತಿಗಳನ್ನು ಕುಸುರಿ ಕೆಲಸದಿಂದ ಬೆಳಗಿಸುವುದು ಪ್ರಾರಂಭವಾಯಿತು. ಇದಕ್ಕೆ ಕುರುವತ್ತಿ ದೇವಾಲಯದ ಬ್ರಹ್ಮನ ವಿಗ್ರಹ ಉತ್ತಮ ನಿದರ್ಶನ ನೋಡಿದ ಕೂಡಲೆ, ಇದು ಹೊಯ್ಸಳರ ಕಾಲದ ವಿಗ್ರಹವಿರಬಹುದು ಎಂಬ ಅನುಮಾನ ಬರುವ ರೀತಿ ಇದೆ ಇದರ ಕೆತ್ತನೆ. ಕಿರೀಟದಲ್ಲಾಗಲೀ, ಪ್ರಭಾವಳಿಯಲ್ಲಾಗಲೀ, ಇಲ್ಲವೇ ಬಟ್ಟೆಯಲ್ಲಾಗಲೀ, ಆಭರಣಗಳಲ್ಲಾಗಲೀ ಕಾಣುವ ಅಲಂಕಾರ ಕುಸುರಿಯು ಕೆಲಸದಂತಹುದು. ಇಲ್ಲಿ ಶಿಲ್ಪದ ಮುಖಭಾವಕ್ಕಿಂತ ನಮ್ಮ ಗಮನ ಸೆಳೆಯುವುದು ಶಿಲ್ಪಿಯ ಕೈಚಳಕ.

ಮದನಿಕೆ ವಿಗ್ರಹ

ದೇವರ ವಿಗ್ರಹಗಳು ಮಾತ್ರವಲ್ಲದೆ, ಸುಂದರ ಯುವತಿಯರ ಮದನಿಕೆ ವಿಗ್ರಹಗಳು, ರಾಮಾಯಣ, ಮಹಾಭಾರತ ಭಾಗವತ ಮುಂತಾದ ಪುರಾಣಗಳಿಂದ ಆಯ್ದ ಕಥೆಗಳು ಮತ್ತು ಪಂಚತಂತ್ರದ ಕಥೆಗಳು ಅನೇಕ ಕಲ್ಯಾಣ ಚಾಲುಕ್ಯ ದೇವಾಲಯಗಳಲ್ಲಿ ಶಿಲ್ಪಿತವಾಗಿವೆ. ಕುರುವತ್ತಿಯ ಮಲ್ಲಿಕಾರ್ಜುನ ದೇವಾಲಯದಲ್ಲಿರುವ ಮದನಿಕೆ ಅಥವಾ ಶಿಲಾಬಾಲಿಕೆಯರ ವಿಗ್ರಹಗಳು ಗಮನಾರ್ಹವಾದವು. ಹೊಯ್ಸಳರು ಇದನ್ನೇ ಮುಂದುವರಿಸಿ ಖ್ಯಾತರಾದರು. ಕುರುವತ್ತಿಯ ಈ ಮದನಿಕೆ ವಿಗ್ರಹಗಳಲ್ಲಿಯೂ ಒಂದು ಸರಳತೆಯಿದೆ. ಬಳುಕುವ ತೆಳುವಾದ ಶರೀರವುಳ್ಳ ಯುವತಿಯೊಬ್ಬಳು ಬಳ್ಳಿಗಳ ಅಲಂಕಾರವುಳ್ಳ ಹಿಂಬದಿಯಲ್ಲಿ ಅತ್ಯಂತ ಸುಂದರವಾಗಿ ಕಾಣುತ್ತಾಳೆ. ಬಳುಕಿನಲ್ಲಿ ಆಕೆಯು ಲತೆಯೊಡನೆ ಸ್ಪರ್ಧೆ ನಡೆಸುತ್ತಿರುವಳೇನೋ ಎಂಬಂತೆ ಕಾಣುತ್ತದೆ. ಆಕೆಯ ಅಲಂಕಾರವೂ ಬಲು ಸರಳ. ವಿಶೇಷ ಗಮನವನ್ನು ಶಿಲ್ಪಿ ಆಕೆಯ ಅಂಗಾಂಗಗಳ ಸಮರಚನೆಗೆ ಕೊಟ್ಟಿದ್ದಾನೆಯೇ ಹೊರತು, ಅಲಂಕಾರಕ್ಕಲ್ಲ. ಈ ದೃಷ್ಟಿಯಿಂದ ಇದೊಂದು ಉತ್ತಮ ಚಾಲುಕ್ಯ ಶಿಲ್ಪ.

ಜಲಸಂಗ್ವಿ

ಇನ್ನೊಂದು ಉತ್ತಮ ಶಿಲ್ಪವೆಂದರೆ ಜಲಸಂಗ್ವಿಯ ಚಾಲುಕ್ಯ ದೇವಾಲಯದ ಹೊರಗೋಡೆಯ ಮೇಲಿರುವ ಶಾಸನ ಸುಂದರಿಯ ಶಿಲ್ಪ. ಇಲ್ಲಿ ಸುಂದರಿಯೊಬ್ಬಳು ಶಾಸನವನ್ನು ಕೊರೆಯುತ್ತಿದ್ದಾಳೆ. ಆಕೆ ತನ್ನ ಎಡಗೈಯಿಂದ ಎತ್ತರದಲ್ಲಿ ಲೇಖನ ಪಠವನ್ನು ಹಿಡಿದು ಬಲಗೈಯಲ್ಲಿ ಲೇಖನಿಯಿಂದ ಒಂದು ಶಾಸನವನ್ನು ಬರೆದು ಮುಗಿಸಿದ್ದಾಳೆ. ಮೂರು ಸಾಲಿನಲ್ಲಿರುವ ಆ ಸಂಸ್ಕೃತ ಭಾಷೆಯ ಆ ಶಾಸನ ಕನ್ನಡಲಿಪಿಯಲ್ಲಿ ಈ ರೀತಿ ಇದೆ :

ಸಪ್ತದ್ವೀಪೋಪರಿಭೂತಂ ಭೂತಲಂ ಸ್ವೀಕರಿಷ್ಯತಿ ।
ಚಲುಕ್ಯೋ ವಿಕ್ರಮಾದಿತ್ಯಃ ಸಪ್ತಮೋ ವಿಷ್ಣುವರ್ಧನಃ

ಇದರ ಮುಖ್ಯಾರ್ಥ ಹೀಗಿದೆ—ಚಾಲುಕ್ಯವಂಶದ ವಿಕ್ರಮಾದಿತ್ಯನೆಂಬ ರಾಜನು ಏಳು ದ್ವೀಪಗಳಿಂದ ಸಮಾವೇಶಗೊಂಡ ಭೂಮಿಯನ್ನು ತನ್ನದಾಗಿ ಮಾಡಿಕೊಂಡು ರಾಜ್ಯಭಾರ ಮಾಡುತ್ತಿದ್ದಾನೆ.

ವಿಶೇಷ ಅಲಂಕಾರಭೂಷಿತಳಾದ ಈಕೆಯು ನಿಂತಿರುವ ರೀತಿ, ಆಕೆ ಬರೆಯುತ್ತಿರುವ ಸುಲಲಿತವಾದ ಭಂಗಿ ನಮ್ಮನ್ನು ಬೆರಗುಗೊಳಿಸುತ್ತವೆ. ಇಲ್ಲಿಯೂ ಚಾಲುಕ್ಯ ಶಿಲ್ಪಿ ತನ್ನ ಜಾಣ್ಮೆಯನ್ನು ತೋರಿಸಿದ್ದಾನೆ. ಇದು ಒಂದು ಕುತೂಹಲಕರವಾದ ಕಲಾಕೃತಿ. ಇದರಲ್ಲಿ ಕಲೆಯನ್ನೂ ಸೊಬಗನ್ನೂ ಶಾಸನದಲ್ಲಿರುವ ಭಾಷೆಯ ಬೆಡಗನ್ನೂ ಇತಿಹಾಸದ ಅಂಶವನ್ನೂ ನಾವು ಕಾಣುತ್ತೇವೆ.

ಪಂಚತಂತ್ರ ಶಿಲ್ಪ

ಬಳ್ಳಿಗಾವಿಯ ತ್ರಿಪುರಾಂತೇಶ್ವರ ದೇವಾಲಯದಲ್ಲಿ ಪಂಚತಂತ್ರದ ಕಥೆಗಳು ಕೆತ್ತಲ್ಪಟ್ಟಿವೆ. ನಾವು ಆಗಲೇ ಗಮನಿಸಿರುವಂತೆ ಪಂಚತಂತ್ರ ಕಥೆಗಳು ಬಾದಾಮಿ ಚಾಲುಕ್ಯ ಶಿಲ್ಪದಲ್ಲಿಯೂ ಮೂಡಿಬಂದಿವೆ. ಬಳ್ಳಿಗಾವೆ



ಶಾಸನಸುಂದರಿ
(ಮಹಾದೇವ ದೇವಾಲಯ, ಜಲಸಂಗ್ವಿ)

[illegible]



ಯಲ್ಲಿ ನಾವು ಕಾಣುವುದು ಹಂಸ ಮತ್ತು ಆಮೆ, ಟಗರು ಮತ್ತು ನರಿ, ಮೊಸಳೆ ಮತ್ತು ಕೋತಿಯ ಕಥೆಗಳನ್ನು ಈ ಪ್ರಾಣಿಗಳು ಬಹು ಸಹಜವಾಗಿ ಕೆತ್ತಲ್ಪಟ್ಟಿದ್ದನ್ನು ನೋಡಿದ ಕೂಡಲೆ ಕಥೆಯು ಅರ್ಥವಾಗುತ್ತದೆ.


ಜಾಲಂಧ್ರಗಳು

ಗಾಳಿ ಮತ್ತು ಬೆಳಕು ದೇವಾಲಯದ ಒಳಗಡೆಗೆ ಬರಲು ಮಾಡಿರುವ ಕಿಟಕಿಗಳೇ ಜಾಲಂಧ್ರಗಳು. ಒಂದೇ ಕಲ್ಲಿನ ಚಪ್ಪಡಿಗಳಲ್ಲಿ ಸೂಕ್ಷ್ಮವಾದ ಕೆತ್ತನೆಯ ಕೆಲಸದಿಂದ ಕೂಡಿರುವ ಇವು ಕಲಾತ್ಮಕವಾಗಿರುತ್ತವೆ. ಲತೆಗಳ ಅಲಂಕಾರ ಅವುಗಳ ಮಧ್ಯದಲ್ಲಿ ಸಣ್ಣ ಪ್ರಮಾಣದ ನೃತ್ಯಗಾತಿಯರು, ಇಲ್ಲ ಹಂಸಗಳು ಮುಂತಾದವನ್ನು ಕೆತ್ತಿರುವ ಈ ಜಾಲಂಧ್ರಗಳು ಸಾಮಾನ್ಯವಾಗಿ ಎಲ್ಲ ಕಲ್ಯಾಣ ಚಾಲುಕ್ಯ ದೇವಾಲಯಗಳಲ್ಲೂ ಇರುತ್ತವೆ. ಬಳ್ಳಿಗಾವಿಯ ತ್ರಿಪುರಾಂತಕ ದೇವಾಲಯದ ಜಾಲಂಧ್ರ ಬಲು ಸುಂದರವಾಗಿದೆ. ಇದರಲ್ಲಿ ವೃತ್ತಾಕಾರದ ಲತಾಲಂಕಾರವಿದೆ. ಇವುಗಳ ಮಧ್ಯದಲ್ಲಿ ಒಬ್ಬ ನೃತ್ಯಗಾರ ನಿದ್ದಾನೆ. ಪ್ರತಿಯೊಂದು ವೃತ್ತದಲ್ಲಿಯೂ ವಿವಿಧ ರೀತಿಯ ನೃತ್ಯವು ಕಂಡು ಬರುತ್ತದೆ. ಈ ನೃತ್ಯಗಾರನ ಕೆತ್ತನೆ ಸೂಕ್ಷ್ಮಶಿಲ್ಪಕ್ಕೆ ಉತ್ತಮ ನಿದರ್ಶನ.


ಈ ಮೇಲೆ ಹೇಳಿದ ದೇವಾಲಯಗಳು ಮತ್ತು ಶಿಲ್ಪಗಳು ಚಾಲುಕ್ಯ ವಾಸ್ತುಶಿಲ್ಪದ ಒಂದು ನೋಟ ಮಾತ್ರ. ಅವುಗಳ ಶ್ರೀಮಂತಿಕೆ ಮತ್ತು ಕಲಾವೈಭವವನ್ನು ನೋಡಿಯೇ ತಿಳಿಯಬೇಕು. ಏಕೆಂದರೆ ಈ ಸುಂದರ ವಾಸ್ತುಶಿಲ್ಪಕೃತಿಗಳು ಬರವಣಿಗೆಗೆ ಸುಲಭವಾಗಿ ಸಿಕ್ಕುವಂತಹವುಗಳಲ್ಲ. ಅವುಗಳು ನೀಡುವ ಆನಂದವನ್ನು ವರ್ಣಿಸುವುದು ಅಸಾಧ್ಯ.

ಅಮೂಲ್ಯ ಆಸ್ತಿ


ಇಂತಹ ವಾಸ್ತುಶಿಲ್ಪ ಕೃತಿಗಳು ನಮ್ಮ ಕನ್ನಡ ನಾಡಿನ, ಭಾರತ ದೇಶದ ಮತ್ತು ಪ್ರಪಂಚದ ಅಮೂಲ್ಯ ಆಸ್ತಿಗಳು. ಗತಕಾಲದ ಜನಗಳು ನಮಗೆ ಬಿಟ್ಟುಹೋದ ಅಮೂಲ್ಯ ಭಂಡಾರ. ಇವುಗಳನ್ನು ನೋಡಿ ಆನಂದಿಸುವುದು, ನಾಡಿನ ಮತ್ತು ಇತಿಹಾಸದ ಬಗೆಗೆ ಹೆಮ್ಮೆ ತಾಳುವಂತಹುದು. ಇವುಗಳನ್ನು ಕಾಪಾಡಿಕೊಂಡು ಬಂದು ಮುಂದಿನ ಜನಾಂಗಕ್ಕೆ ಕೊಡುವುದು



[illegible]




ಕಾಶಿ ವಿಶ್ವೇಶ್ವರ ದೇವಾಲಯ, ಲಕ್ಕುಂಡಿ



ಬಳ್ಳಿಗಾವಿಯ ತ್ರಿಪುರಾಂತಕ ದೇವಾಲಯದ ಜಾಲಂಧ್ರಗಳು

ನಮ್ಮ ಕರ್ತವ್ಯ. ಆದುದರಿಂದ ಈ ಶಿಲ್ಪಕೃತಿಗಳನ್ನು ಹಾಳುಮಾಡುವುದು, ವಿರೂಪಗೊಳಿಸುವುದು ಮುಂತಾದವುಗಳನ್ನು ಮಾಡದೆ ಅವುಗಳ ಸಂರಕ್ಷಣೆಗೆ ಸಹಾಯ ಮಾಡುವುದು ಎಲ್ಲರ ಕರ್ತವ್ಯ. ಹೀಗೆ ಮಾಡಿದರೆ ನಮ್ಮ ಸಾಂಸ್ಕೃತಿಕ ನಾಡಿಗೆ ನಾವು ವಿಶೇಷ ಸೇವೆ ಸಲ್ಲಿಸಿದಂತೆ ಆಗುತ್ತದೆ. ಇದು ನಮ್ಮ ಕರ್ತವ್ಯವೂ ಹೌದು.


ಪ್ರಥಮ ವಿಶ್ವ ಕನ್ನಡ ಸಮ್ಮೇಳನ
1982